# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು : ಮಹೇಶ್ವರಿ ಭೀಮಶಿ ಭರಮಣ್ಣವರ
EDITOR : MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail:
belagavivarte1@gmail.com

Volume: 01 | Issue : 22 | SUNDAY 29-03-2026 | PRGI No : KNKAN/26/A0962 | Pages:4 Rs.2.00 | M: 9742418836


## 'ಹೇ ರೇಪಿಸ್ಟ್ ಕುಳಿತುಕೋ' ಸದನದಲ್ಲಿ ಡಿಕೆಶಿ–ಮುನಿರತ್ನ ನಡುವೆ ಮಾತಿನ ಚಕಮಕಿ, ವಿಧಾನಸಭೆಯಲ್ಲಿ ಕೋಲಾಹಲ



ಬೆಂಗಳೂರು: ವಿಧಾನಸಭೆಯಲ್ಲಿ ಅಸಭ್ಯ ಪದಪ್ರಯೋಗದ ಆರೋಪದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರ ನಡುವೆ ಗುರುವಾರ ತೀವ್ರ ವಾಗ್ವಾದ ನಡೆಯಿತು.

ಉಪಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಹಾಗೂ ಬಿಜೆಪಿ ಶಾಸಕ ಮುನಿರತ್ನ ನಡುವಿನ ಮಾತಿನ ಚಕಮಕಿ ಸದನದಲ್ಲಿ ಗದ್ದಲಕ್ಕೆ ಕಾರಣವಾಯಿತು.

ಬೆಂಗಳೂರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ವೇಳೆ ವೈಯುಕ್ತಿಕ ಆರೋಪ ಮತ್ತು ಪ್ರತ್ಯಾರೋಪಗಳು ಕೇಳಿಬಂದವು.

ಮುನಿರತ್ನ ಮಾಡಿದ ಆರೋಪಕ್ಕೆ ಉತ್ತರ ನೀಡಲು ಮುಂದಾದ ಡಿಕೆ.ಶಿವಕುಮಾರ್ ಅವರು ತೀವ್ರವಾಗಿ ಕಿಡಿಕಾರಿದರು.

ಅಶೋಕ್ ಗೆ ಹೇಗೆ ಏಡ್ಸ್ ಚುಚ್ಚುಮದ್ದು ಚುಚ್ಚಿದ್ರು ಎಂದು ಎಆರ್ ಇದೆ. ಅದರ ಬಗ್ಗೆ ಚರ್ಚೆ ಮಾಡಬೇಕು ಅಂದರೆ ಮಾಡ್ತೀನಿ ಎಂದರು.

ಡಿಕೆಶಿ ಮಾತಿನಿಂದ ರೊಚ್ಚಿಗೆದ್ದ ಮುನಿರತ್ನ, 'ಈ ವೇಳೆ ಎಲ್ಲವನ್ನೂ ಹೇಳಿ' ಎಂದು ಸವಾಲು ಹಾಕಿದರು. ಆಯ್ತಣ್ಣ ಮುನಿರತ್ನ ಕೂತ್ಕೊಳಣ್ಣಾ ಎಂದು ಡಿಕೆಶಿ ಸಿಟ್ಟಾದರು. ಈ ವೇಳೆ, ಡಿಕೆಶಿ ಮಾತಿಗೆ ಅಶೋಕ್, ಅಶ್ವಥ್ ನಾರಾಯಣ್ ಆಕ್ಷೇಪ ವ್ಯಕ್ತಪಡಿಸಿದರು. ಆದರೆ, ಮುನಿರತ್ನ ಚರ್ಚೆಗೆ ಪಟ್ಟು ಹಿಡಿದರು. ಹೀಗಾಗಿ ಸದನದಲ್ಲಿ ಭಾರಿ ಗದ್ದಲ ಉಂಟಾಯಿತು.

"ನನಗೆ ಮಾತನಾಡಲು ಅವಕಾಶ ಕೊಡಬೇಕು. ನಾನು ಉತ್ತರ ಕೊಡುತ್ತೇನೆ. ಇವರು ಮಾಡಿರುವಂತಹ ಪಾಪದ ಕೆಲಸ. ಅಧಿಕಾರ ದುರ್ಬಳಕೆ ಮಾಡಿ ನನ್ನ ವಿರುದ್ಧ ಎಫ್ ಐ ಆರ್ ಮಾಡಿಸಿದ್ದಾರೆ. 'ಇವರಿಗೆ ಮೂರು ಮಕ್ಕಳಿವೆ ಅದನ್ನು ಮರೆಯಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ "ಹೇ ರೇಪಿಸ್ಟ್ ಕೂತ್ಕೋ" ಎಂದು ಡಿಕೆಶಿ ತಿರುಗೇಟು ನೀಡಿದರು.

ಈ ವೇಳೆ ವೈಯಕ್ತಿಕ ನಿಂದನೆ ಸರಿಯಲ್ಲ ಅಂತ ಡಿಕೆಶಿ ಪರವಾಗಿ ಕಾಂಗ್ರೆಸ್ ಸದಸ್ಯ ನಿಂತರು. ಎಲ್ಲರಿಗೂ ಮಕ್ಕಳಿವೆ ಎಂದು ತಿರುಗೇಟು ನೀಡಿದರು. ಮಧ್ಯಪ್ರವೇಶಿಸಿದ ಬಿಜೆಪಿ ನಾಯಕರು, "ಸದನದಲ್ಲಿ ಮುನಿರತ್ನ ಅವರು ಕೇಳಿದ ಪ್ರಶ್ನೆಗೆ ಡಿಕೆಶಿ ಉತ್ತರ ಕೊಡಬೇಕು. ಅದು ಬಿಟ್ಟು ರೇಪಿಸ್ಟ್, ಏಡ್ಸ್ ಇಂಜೆಕ್ಷನ್ ಅಂತ ವೈಯಕ್ತಿಕ ಹೇಳಿಕೆ ಸರಿಯಲ್ಲ ಎಂದರು.

ಬಳಿಕ ಮುನಿರತ್ನ ಅವರು ಅಸಭ್ಯ ಪದಪ್ರಯೋಗ ಮಾಡಿದ್ದಾರೆ ಎಂದು ಆರೋಪಿಸಿ, ಕಾಂಗ್ರೆಸ್ ಶಾಸಕರು ಅವರಿಗೆ ಮನವಿ ಮಾಡಿ ಅವರನ್ನು ಸದನದಿಂದ ಅಮಾನತು ಮಾಡುವಂತೆ ಒತ್ತಾಯಿಸಿದರು. ನಂತರ ಸದನದ ಮಧ್ಯಭಾಗಕ್ಕೆ ಧಾವಿಸಿ ಪ್ರತಿಭಟನೆ ನಡೆಸಿದರು.

ಇನ್ನೊಂದೆಡೆ, ಬಿಜೆಪಿ ಸದಸ್ಯರು ಡಿ.ಕೆ. ಶಿವಕುಮಾರ್ ಬಳಸಿದ ಪದಗಳನ್ನು ದಾಖಲೆಗಳಿಂದ ತೆಗೆದುಹಾಕುವಂತೆ ಆಗ್ರಹಿಸಿದರು.

ಸ ವ ಾ ಸ ೃ ಗಂಭೀರವಾಗುತ್ತಿದ್ದಂತೆ, ಸ್ಪೀಕರ್ ಯು.ಟಿ. ಖಾದರ್ ಮಧ್ಯಪ್ರವೇಶಿಸಿ, ಉಭಯಪಕ್ಷದ ನಾಯಕರಿಂದ ಬಳಸಲ್ಪಟ್ಟ ಅಸಭ್ಯ ಪದಗಳನ್ನು ವಿಧಾನಸಭಾ ದಾಖಲೆಗಳಿಂದ ತೆಗೆದುಹಾಕುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

## ದಾವಣಗೆರೆ ಕಾಂಗ್ರೆಸ್ ಬಂಡಾಯಕ್ಕೆ ಬಿಗ್ ಟ್ವಿಸ್ಟ್: ಸಿಎಂ ಸಿದ್ದರಾಮಯ್ಯ ಭೇಟಿಯಾದ ಸಾದಿಕ್ ಪೈಲ್ವಾನ್!



ಬೆಂಗಳೂರು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಬಂಡಾಯಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದ್ದು, ನಾಮಪತ್ರ ಹಿಂಪಡೆಯದೇ ಕಣದಲ್ಲಿ ಉಳಿದಿದ್ದ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಅವರು ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದಾರೆ.

ಕಾಂಗ್ರೆಸ್ ಶಾಸಕರಾದ ರಿಜ್ವಾನ್ ಅರ್ಷದ್ ಹಾಗೂ ಸಲೀಂ ಅಹ್ಮದ್ ಖಾನ್ ಅವರು ಇಂದು ಸಾದಿಕ್ ಪೈಲ್ವಾನ್ ಅವರನ್ನು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಗೆ ಕರೆದುಕೊಂಡು ಬಂದಿದ್ದರು. ಸಿಎಂ ಸಿದ್ದರಾಮಯ್ಯ ಅವರು ಸಾದಿಕ್ ಪೈಲ್ವಾನ್ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದು, ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡಲು ಒಪ್ಪಿಕೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಎಸ್ಎಸ್ ಮಲ್ಲಿಕಾರ್ಜುನ ಪುತ್ರ ಸಮರ್ಥ್ ಗೆ ಟಿಕೆಟ್ ನೀಡಿದ್ದಕ್ಕಾಗಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಸಾದಿಕ್ ಪೈಲ್ವಾನ್ ಅವರು ಸಿಎಂ ಸಿದ್ದರಾಮಯ್ಯ ಮಾತಿಗೆ ಸಮ್ಮತಿ ಸೂಚಿಸಿದ್ದು, ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡುವುದಾಗಿ ಹೇಳಿದ್ದಾರೆ. ಟಿಕೆಟ್ ನಿರಾಕರಿಸಿದ್ದಕ್ಕೆ ಆಕ್ರೋಶಗೊಂಡು ನಾಮಪತ್ರ ಸಲ್ಲಿಸಿದ್ದೆ, ನಿಮ್ಮ ಜೊತೆಗಿನ ಮಾತುಕತೆ ಸಮಾಧಾನ ತಂದಿದೆ. ಈಗಿನಿಂದಲೇ ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡುತ್ತೇನೆ. ನಮ್ಮ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲಬಾರದು, ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆಂದು ಸಾದಿಕ್ ಅವರು ಸಿಎಂಗೆ ಭರವಸೆ ನೀಡಿದ್ದಾರೆ ಎಂಬ ಮಾಹಿತಿ ಇದೆ.

ಸಿಎಂ ಭೇಟಿ ಬಳಿಕೆ ಡಿಸಿಎಂ ಡಿ.ಕೆ ಶಿವಕುಮಾರ್ ಭೇಟಿಗೆ ಸಾದಿಕ್ ಪೈಲ್ವಾನ್ ತೆರಳಿದ್ದಾರೆ. ಈ ಮೂಲಕ ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಬಂಡಾಯ ಶಮನವಾದಂತಾಗಿದೆ.

## ಜಯಂತಿ ಆಚರಣೆಯ ಪೂರ್ವಭಾವಿ ಸಭೆ



**ಬೆಳಗಾವಿ ವಾರ್ತೆ**

ಚನ್ನಮ್ಮನ ಕಿತ್ತೂರು: ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಏಪ್ರೀಲ್ 5ರಂದು ಮತ್ತು ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರರ 135ನೇ ಜಯಂತಿ ಏಪ್ರೀಲ್ 14 ರಂದು ಸಮಾಜ ಕಲ್ಯಾಣ ಹಾಗೂ ತಾಲೂಕಾ ಡಳಿತ, ತಾಪಂ, ಪಪಂಗಳಿಂದ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಅದ್ದೂರಿಯಾಗಿ ಆಚರಿಸೋಣ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಸಕ್ರೀಯವಾಗಿ ಭಾಗವಹಿಸಬೇಕೆಂದು ತಹಶೀಲ್ದಾರ ಕಲ್ಲನಗೌಡ ಪಾಟೀಲ ತಿಳಿಸಿದರು.

ತಾಲೂಕಾಡಳಿತ ಸೌಧದ ಕಛೇರಿ ನೂತನ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕಾಡಳಿತ, ತಾಪಂ, ಪಪಂ ಸಂಯುಕ್ತ ಆಶ್ರಯದಲ್ಲಿ ಅಂಬೇಡ್ಕರ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತೋತ್ಸವದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ. ಬಿಸಿಲಿನ ತಾಪಮಾನ ಹೆಚ್ಚಿಗೆ ಇರುವುದರಿಂದ ಎಲ್ಲರೂ ಮುಂಜಾನೆ 8 ಗಂಟೆಗೆ ಸೇರಿ 10 ಗಂಟೆಯೊಳಗಾಗಿ ಪ್ರತಿವರ್ಷದಂತೆ ಚನ್ನಮ್ಮನ ವರ್ತುಳದಿಂದ ಗುರುವಾರ ಪೇಟೆ ಅರಳೀಕಟ್ಟೆ ಮಾರ್ಗವಾಗಿ ಪಪಂವರೆಗೆ ಮೆರವಣಿಗೆ ಅಂತ್ಯಗೊಳಿಸಬೇಕೆಂದು ಸೂಚಿಸಿದರು. ಸರ್ಕಾರ ನಿಯಮಾವಳಿ ಪ್ರಕಾರ ಜಯಂತಿ ಆಚರಿಸಲಾಗುವುದು. ಆಯಾ ಇಲಾಖಾ ಅಧಿಕಾರಿಗಳಿಗೆ ಒಂದೊಂದು ಜವಾಬ್ದಾರಿ ನೀಡಿ ತಾಲೂಕಿನ ಎಲ್ಲ ಶಾಲೆಗಳಲ್ಲಿ ಮುಂಜಾನೆ 8 ಗಂಟೆಗೆ ಜಯಂತಿ ಆಚರಿಸಲು ಸೂಚಿಸಿದರು. ಕುಂಭ ಮೇಳ, ಕರಡಿ ಮಜಲು, ಇನ್ನೂ ಅನೇಕ ಕಲಾ ತಂಡಗಳನ್ನೊಳಗೊಂಡ ಮೆರವಣಿಗೆ ಹಮ್ಮಿಕೊಂಡು ಉಭಯ ಮಹಾನಾಯಕರ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುವುದೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾಸ್ತಾವಿಕವಾಗಿ ಮಾತನಾಡಿದ ನಿರ್ದೇಶಕ ಮಲ್ಲಿಕಾರ್ಜುನ ಉಳ್ಳಾಗಡ್ಡಿ ಅಂಬೇಡ್ಕರ ಹಾಗೂ ಬಾಬು ಜಗಜೀವನ್ ರಾಮ್ ಅವರ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸೋಣ ಕಳೆದ ಎಸ್ಎಸ್ಎಲ್ಸಿ–ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಲಾಗುವುದು. ಸಾರ್ವಜನಿಕರು ಹಾಗೂ ಮುಖಂಡರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶೋಭೆ ತರವುದು ಅತ್ಯಂತ ಅಗತ್ಯ. ಅಂಬೇಡ್ಕರ ಹಾಗೂ ಬಾಬಾ ಜಗಜೀವನ್ ರಾಮ್ ಅವರ ಜೀವನ, ಸಾಧನೆ, ಸಮಾಜ ಸೇವೆ ಮತ್ತು ಸಮಾನತೆ ಸಂದೇಶಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಈ ಜಯಂತಿಯ ಉದ್ದೇಶ ಅದಕ್ಕಾಗಿ ಅರ್ಥಪೂರ್ಣವಾಗಿ ಆಚರಿಸೋಣನೆಂದರು. ಕಾರ್ಯಕ್ರಮ ಸ್ಥಳೀಯ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲು ನಿರ್ಧರಿಸಲಾಯಿತು.

ಈ ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಶಾಸಕ ಬಾಬಾಸಾಹೇಬ ಪಾಟೀಲ, ರಾಜಗುರು ಸಂಸ್ಥಾನ ಕಲ್ಮಠ ಮಡಿವಾಳ ರಾಜಯೋಗೀಂದ್ರ ಸ್ವಾಮಿಜೀ, ನಿಚ್ಚಣಕಿ ಶ್ರೀ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮಿಜಿ, ಉಪನ್ಯಾಸಕರನ್ನಾಗಿ ಪ್ರೋ. ಮಹೇಶ ಚನ್ನಂಗಿ, ಇವರುಗಳನ್ನು ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸಲು ನಿರ್ಧರಿಸಲಾಯಿತು. ಸಾರ್ವಜನಿಕರಿಂದ ವಿವಿಧ ಅಹವಾಲುಗಳು ಕೇಳಿಬಂದವು.

ಈ ವೇಳೆ ಮುಖ್ಯ ಅತಿಥಿಗಳಾಗಿ ಪ್ರಭಾರ ವಿಶೇಷ ತಹಶೀಲ್ದಾರ ಪ್ರಕಾಶ ಕೋರೆ, ತಾಪಂ ಇಓ ನಿಂಗಪ್ಪ ಮಸಳಿ, ಸಿಪಿಐ ಶಿವಾನಂದ ಗುಡಗನಟ್ಟಿ, ಪಪಂ ಮುಖ್ಯಾಧಿಕಾರಿ ಮಲ್ಲಯ್ಯಾ ಹಿರೇಮಠ, ಎಂಕೆ ಹುಬ್ಬಳ್ಳಿ ಪಪಂ ಅಧಿಕಾರಿ, ಮುಖಂಡರುಗಳಾದ ರಾಜು ಜಾಗಂಟಿ, ಫಕ್ಕೀರ ಜಾಗಂಟಿ, ಸುರೇಶ ಜಾಗಂಟಿ, ಶಿವನಂದ ಚನ್ನನ್ನವರ, ಭೀಮಪ್ಪ ದುರಗಣ್ಣವರ, ಬಸವರಾಜ ಕೆಳಗಡೆ, ಮಡಿವಾಳಪ್ಪ ವಕ್ಕುಂದ, ಮಂಜುನಾಥ ಮಣ್ಣವಡ್ಡರ, ಪಿಡಬ್ಲೂಡಿ ಎಇಇ ಸಂಜೀವ ಮಿರಜಕರ, ಆರೋಗ್ಯ, ಪಶು ಇಲಾಖೆ, ಪಪಂ ಎಂಕೆಹುಬ್ಬಳ್ಳಿ, ಸಮಾಜದ ಮುಖಂಡರು, ತಾಲೂಕ ಮಟ್ಟದ ಎಲ್ಲ ಅಧಿಕಾರಿಗಳು, ಸ.ಮಾ.ಇ. ಸಿಬ್ಬಂದಿ ಮಂಜುನಾಥ ಮಕರವಳ್ಳಿ, ಸುರೇಶ ಬೈಲಪ್ಪನವರ, ಮಂಜುನಾಥ ತೊಟಗಿ, ಎಂ ಎಸ್ ಪಾಟೀಲ, ಎಸ್ ಶೀಗಿಹಳ್ಳಿ, ವಿ.ಎಲ್. ನಾಡಗೌಡರ, ತಹಶೀಲ್ದಾರ ಸಿಬ್ಬಂದಿ, ಇನ್ನಿತರರಿದ್ದರು.

## ನೇಮಕಕ್ಕೆ ಮನವಿ



**ಬೆಳಗಾವಿ ವಾರ್ತೆ**

**ಚನ್ನಮ್ಮನ ಕಿತ್ತೂರು:** ತಾಪಂ ಕಾರ್ಯಾಲಯದಲ್ಲಿ ತಾಪಂ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ವಿಜಯ ಪಾಟೀಲವರಿಗೆ 17 ಗ್ರಾಪಂ ವ್ಯಾಪ್ತಿಯ ಗ್ರಾಮೀಣ ಮತ್ತು ನಗರ ಪುನರ್ ವಸತಿ ಕಾರ್ಯಕರ್ತರೆಲ್ಲರೂ ಸೇರಿ ತಾಲೂಕಾ ವಿವಿಧ್ಯೋದ್ದೇಶ ಪುನರ್ ವಸತಿ ಕಾರ್ಯಕರ್ತರನ್ನು ನೇಮಕ ಮಾಡುವಂತೆ ಮನವಿ ಪತ್ರ ಸಲ್ಲಿಸಿದರು. ಮೇಲ್ಕಾಣಿಸಿದ ವಿಷಯಕ್ಕೆ ಸಂಭಂದಿಸಿದಂತೆ ಕಿತ್ತೂರ ತಾಲೂಕಿನ ಎಲ್ಲಾ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತರು ಮತ್ತು ವಿಕಲಚೇತನರ ಪಾಲಕರು–ಪೋಷಕರು ಯಾವುದೆ ಮಾಹಿತಿ ತೆಗೆದುಕೊಂಡು ಕಿತ್ತೂರಿನಿಂದ ಬೈಲಹೊಂಗಲಕ್ಕೆ ತೆರಳಬೇಕಾದರೆ ಅಂತರ 40ಕಿಮೀ. ಇದ್ದು ಹೋಗಿಬರಲು ಸರಿಯಾಗಿ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಅನಾನೂಕೂಲವಿದ್ದು ಸಮಯಕ್ಕೆ ಸರಿಯಾಗಿ ಮಾಹಿತಿ ನೀಡಲು ಆಗುತ್ತಿಲ್ಲ. ಆದಕಾರಣದಿಂದ ಎಲ್ಲಾ ಗ್ರಾಪಂ ಪುನರ್ ವಸತಿ ಕಾರ್ಯಕರ್ತರಿಗೆ ತೊಂದರೆಯಾಗುವುದರಿಂದ ತಕ್ಷಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಚೇತನ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ ಸಚಿವರು, ಸ್ಥಳೀಯ ಶಾಸಕರು, ಜಿಪಂ ಮುಖ್ಯನಿರ್ವಾಹಕ ಕಾರ್ಯಕಾರಿ ಅಧಿಕಾರಿ ಹಾಗೂ ಮೇಲಾಧಿಕಾರಿಗಳು ಗಮನಹರಿಸಿ ತಾಪಂ ಕಿತ್ತೂರಿನಲ್ಲಿ ವಿವಿಧ್ಯೋದ್ದೇಶ ಪುನರ್ ವಸತಿ ಕಾರ್ಯಕರ್ತರನ್ನು ಶೀಘ್ರವೇ ನೇಮಕ ಮಾಡಿ ತಾಪಂದಲ್ಲಿ ಸ್ಥಳಾವಕಾಶ ನೀಡಿ ಇಲ್ಲಿ ಕಾರ್ಯನಿರ್ವಹಿಸಲು ಅನುಕೂಲು ಮಾಡಿ ಕೊಡಬೇಕೆಂದು ಮನವಿ ಪತ್ರದ ಮೂಲಕ ತಿಳಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ವಿಜಯ ಪಾಟೀಲ ಅವರು ನಿಮ್ಮ ಮನವಿಯನ್ನು ಮೇಲಾಧಿಕಾರಿ ಗಮನಕ್ಕೆ ತರಲಾಗುವುದೆಂದರು.


ಈ ವೇಳೆ ತಾಪಂ ಸಹಾಯಕ ಅಧಿಕಾರಿಗಳಾದ ಲಿಂಗರಾಜ ಹಲಕರ್ಣಿಮಠ, ನಾಗಪ್ಪ ಕಳ್ಳಿಮನಿ, 17 ಗ್ರಾಪಂ ಪುನರ್ ವಸತಿ ಕಾರ್ಯಕರ್ತರು ಇತರರಿದ್ದರು.

## ರಾಮ ನವಮಿಯ ಪ್ರಯುಕ್ತ ತೊಟ್ಟಿಲೋತ್ಸವ ಕಾರ್ಯಕ್ರಮ



ಹುಬ್ಬಳ್ಳಿ: ತಾಲೂಕಿನ ಮಿಶ್ರಿಕೋಟಿಯಲ್ಲಿ ನಾರಾಯಣ ರಾವ ಪದಕಿ ಹಾಗೂ ದತ್ತಣ್ಣ ದೇಸಾಯಿ ಬಂಧುಗಳಿಂದ ರಾಮ ನವಮಿಯ ಪ್ರಯುಕ್ತ ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಯಿತು. ಪಂಡಿತ ನರಹರಿ ಆಚಾರ್ಯ ವಾಳ್ವೇಕರ ಹಾಗೂ ಪಂಡಿತ ಸುಘೋಶ ಆಚಾರ್ಯ ರಿಂದ ಪ್ರವಚನ ಹಾಗೂ ಭಗವದ್ಗೀತಾ ಭಜನಾ ಮಂಡಳಿಯ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಡಾ.ವಿ.ಜಿ.ನಾಡಗೌಡ, ಗೋವಿಂದ ಮೈಸೂರ, ಆರ್.ಆರ್.ಕುಲಕರ್ಣಿ, ಗೋಪಾಲ ಕುಲಕರ್ಣಿ, ಶ್ರೀನಿವಾಸ ಕುಂದರಗಿ, ಹರ್ಷ ಪದಕಿ, ಪವನ ದೇಸಾಯಿ, ರವಿ ದೇಸಾಯಿ, ಸುರೇಖಾ ಕುಲಕರ್ಣಿ, ಪರಿಮಳಾ ವಾಳ್ವೇಕರ, ಜಯಪ್ರದಾ ಪದಕಿ, ವಿಜಯಾಬಾಯಿ ದೇಸಾಯಿ, ವಾಣಿ ದೇಸಾಯಿ, ಅಮೃತಾ, ಜ್ಯೋತಿ ಕುಲಕರ್ಣಿ, ಪದ್ಮಾ ಕುಂದರಗಿ, ನಿರ್ಮಲಾ ಕುಲಕರ್ಣಿ, ಪಲ್ಲವಿ ಜೋಶಿ, ಉಷಾ ಕಟ್ಟಿ, ವಿದ್ಯಾ ಜಕಾತಿ, ಗೋದಾವರಿ ಆಲೂರ, ಶಶಿಕಲಾ ಜಮಖಂಡಿ ಭಾಗವಹಿಸಿದ್ದರು.

## ಸಿಡಿಲು ಬಡಿದು ತೆಂಗಿನ ಮರಕ್ಕೆ ಬೆಂಕಿ



ನವಲಗುಂದ: ತಾಲ್ಲೂಕಿನ ಯಮನೂರ ಗ್ರಾಮದ ಗೌಡ್ರ ಓಣಿಯಲ್ಲಿರುವ ಅಂದಾನಪ್ಪ ಪಕ್ಕೀರಪ್ಪ ಯಕ್ಕುಂಡಿ ಯವರ ಹಿತ್ತಲಿನಲ್ಲಿರುವ ತೆಂಗಿನಮರಕ್ಕೆ ಸಿಡಿಲು ಬಡೆದು ಬೆಂಕಿ ಹತ್ತಿ ಉರಿಯುತ್ತಿರುವುದನ್ನು ಗಮನಿಸಿದ ಗ್ರಾಮಸ್ಥರು ಅಗ್ನಿಶಾಮಕ ಠಾಣಾಧಿಕಾರಿಗೆ ಕರೆ ಮಾಡಿ ಹೇಳಿದರು ಯಾರು ಕೂಡ ಆಗಮಿಸದ ಕಾರಣ ಗ್ರಾಮಸ್ಥರು ಅನಿವಾರ್ಯವಾಗಿ ತಾವೇ ನೀರು ಬೆಂಕಿ ನಂದಿಸಿದ್ದಾರೆ.

ಮರಕ್ಕೆ ತಗುಲಿದ ಬೆಂಕಿ ನಂದಿಸದಿದ್ದಲ್ಲಿ ಪಕ್ಕದಲ್ಲಿರುವ ಮೇವು ಹಾಗೂ ಹೊಟ್ಟಿನ ಬಣವಿಗೆ ಆವರಿಸುವ ಸಾಧ್ಯತೆ ಇತ್ತು ನವಲಗುಂದ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ ಇಲ್ಲದೆ ಇರುವುದಕ್ಕೆ ಅಂದಾನಪ್ಪ ಯಕ್ಕುಂಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ರಂಗಭೂಮಿಯು ಚಿರಂತನತೆಯನ್ನು ಹೊಂದಿ ಬೆಳವಣಿಗೆಯತ್ತ ಸಾಗಲಿ




**ಬೆಳಗಾವಿ ವಾರ್ತೆ**

**ಧಾರವಾಡ:** ಯಾವುದೇ ಭೇದ–ಭಾವ, ಕೀಳರಿಮೆ, ಬಡವ–ಶ್ರೀಮಂತ ಎನ್ನದೇ ರಂಗಭೂಮಿಯು ಕಲಾವಿದರಿಗೆ ಆಶ್ರಯವನ್ನು ನೀಡಿ, ಅವರ ಬದುಕಿಗೆ ದಾರಿಯನ್ನು ತೋರುವ ಮೂಲಕ ರಂಗಭೂಮಿಯಲ್ಲಿ ಹೊಸತನವನ್ನು ಮೂಡಿಸುತ್ತಿದೆ ಎಂದು ರಂಗಭೂಮಿ ಕಲಾವಿದೆ ಶಶಿಪ್ರಭಾ ಕೆ. ಆರಾಧ್ಯ ಅವರು ಹೇಳಿದರು.

ಇಂದು ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಸಭಾಭವನದಲ್ಲಿ "ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸ, ರಂಗಗೀತೆಗಳು ಹಾಗೂ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ನಡೆಯುತ್ತಿರುವ ಪ್ರಚಲಿತ ವಿದ್ಯಮಾನಗಳು, ಐತಿಹಾಸಿಕ, ಸಾಮಾಜಿಕ ಪಿಡುಗುಗಳು ಸೇರಿದಂತೆ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲುವಂತಹ ನಾಟಕಗಳು ಜನರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ. ಅಂತಹ ನಾಟಕಗಳ ಮೂಲಕ ನೋಡುಗರಿಗೆ ಅರಿವನ್ನು ಮೂಡಿಸುವ ಕಾರ್ಯವನ್ನು ರಂಗಾಯಣ ಮಾಡುತ್ತಿದೆ ಎಂದರು.

ಹಿರಿಯ ಚಿಂತಕರಾದ ಡಾ.ಶ್ರೀರಾಮ ಭಟ್ಟ ಅವರು, ಭರತ ಮುನಿಯ ನಾಟ್ಯಶಾಸ್ತ್ರದಲ್ಲಿ ರಂಗಭೂಮಿಯ ವಿನ್ಯಾಸ, ನಟನೆ, ರಸಸಿದ್ಧಾಂತಗಳ ಕುರಿತು ವಿವರಿಸುತ್ತದೆ. ಅಂದಿನಿಂದಲೂ ನಾಟಕಗಳು ಪ್ರಚಲಿತದಲ್ಲಿದ್ದವು. ಕಾಲದಿಂದ ಕಾಲಕ್ಕೆ ನಾಟಕಗಳು ಬದಲಾವಣೆಗೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿವೆ. ಸಂಸ್ಕೃತ ನಾಟಕಗಳ ಮೇಲೆ ಗ್ರೀಕ್ ನಾಟಕಗಳು ಹಾಗೂ ಭಾರತೀಯ ರಂಗಭೂಮಿಯ ಮೇಲೆ ಸಂಸ್ಕೃತ ನಾಟಕಗಳು ಪ್ರಭಾವವನ್ನು ಬೀರಿದ್ದವು. ಸಂಸ್ಕೃತ ನಾಟಕಗಳ ಅನುವಾದ, ಗ್ರೀಕ್ ನಾಟಕಗಳ ಪ್ರಭಾವದಿಂದ ಕನ್ನಡ ರಂಗಭೂಮಿಯು ಬೆಳೆಯಿತು. ಪಾಶ್ಚಾತ್ಯೀಕರಣ, ಜನಪದ ರಂಗಭೂಮಿ ಹಾಗೂ ತೊಗಲುಬೊಂಬೆಯಾಟ ಹೀಗೆ ರಂಗಭೂಮಿಯು ಬೆಳೆಯುತ್ತಾ ತನ್ನವ್ಯಾಪ್ತಿಯನ್ನು ವಿಸ್ತರಿಸಿದೆ. ಜನರನ್ನು ತಲುಪುವಂತೆ ನಾಟಕಗಳನ್ನು ಹೇಗೆ ಮಾಡಬೇಕು ಎಂಬುದರ ಮೇಲೆ ಅದರ ಯಶಸ್ಸು ಅಡಗಿರುತ್ತದೆ. ಶಾಂತಕವಿ ಸಕ್ಕರಿ ಬಾಳಾಚಾರ್ಯರು ಹೊಸಗನ್ನಡ ಕಾವ್ಯರಚಿಸಿ ಯಕ್ಷಗಾನ ತಂತ್ರವನ್ನು ಬಳಸಿಕೊಂಡು ಹಲವಾರು ನಾಟಕಗಳನ್ನು ಬರೆದು ಸ್ವತಃ ಅವರೇ ಕಲಿಸಿ ಪ್ರದರ್ಶಿಸುವ ಮೂಲಕ ಕನ್ನಡ ರಂಗಭೂಮಿಗೆ ಭದ್ರಬುನಾದಿಯನ್ನು ಹಾಕಿದರು ಎಂದು "ಕನ್ನಡ ರಂಗಭೂಮಿಯ ಪೂರ್ವಭಾವ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಕೆ.ಎಚ್.ಚನ್ನೂರ ಅವರು ಅಧ್ಯಕ್ಷತೆ ವಹಿಸಿ, ಮಾತನಾಡಿ, ಸಾಮಾಜಿಕ ಜಾಲತಾಣಗಳ ಇಂದಿನ ಯುಗದಲ್ಲಿ ರಂಗಭೂಮಿಯು ಅಸಮಾನತೆಯನ್ನು ಹೊಗಲಾಡಿಸಿ ಆತ್ಮಸ್ಥೈರ್ಯವನ್ನು ತುಂಬುವ ಕಾರ್ಯ ಮಾಡುತ್ತಿದೆ. ಜನರನ್ನು ಎಚ್ಚರಗೊಳಿಸಿ, ಅವರಲ್ಲಿ ಬದಲಾವಣೆಯನ್ನು ತರುವಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಮೂಲಕ ರಂಗಭೂಮಿಯು ಜೀವಂತವಿದೆ ಎಂದು ಹೇಳಿದರು.

ರಂಗಭೂಮಿ ಕಲಾವಿದೆ ಶಶಿಪ್ರಭಾ ಕೆ. ಆರಾಧ್ಯ, ಹಿರಿಯ ಚಿಂತಕರಾದ ಡಾ.ಶ್ರೀರಾಮ ಭಟ್ಟ ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಗೋಪಾಲ ಉಣಕಲ್ಲ ಅವರನ್ನು ಸನ್ಮಾನಿಸಲಾಯಿತು. ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕ್ಕಮ್ಮಾ ದೇವರಮನಿ ವಿಶ್ವ ರಂಗಭೂಮಿ ಸಂದೇಶವನ್ನು ಓದಿದರು. ವಿನೋದ ದಂಡಿನ ನಿರೂಪಿಸಿದರು.

ನಂತರ ಕುಮಾರ ಲಾಲಸಾಬ್ ಹಾಗೂ ಲಕ್ಷ್ಮಣ ಪೀರಗಾರ ರಚಿಸಿ, ರಾಘವ ಕಮ್ಮಾರ ಸಂಗೀತ ಸಂಯೋಜಿಸಿ, ನಿಕಟಪೂರ್ವ ನಿರ್ದೇಶಕರಾದ ದಿ.ರಾಜು ತಾಳಿಕೋಟಿ ಅವರು ಪರಿಕಲ್ಪನೆ/ಮಾರ್ಗದರ್ಶನ ಮಾಡಿದ "ಮರಳಿ ಮಹಾತ್ಮನೆಡೆಗೆ" ನಾಟಕವನ್ನು ಹಾಗೂ ರಂಗಗೀತೆಗಳನ್ನು ರಂಗಾಯಣದ ರೆಪರ್ಟರಿ ಕಲಾವಿದರು ಪ್ರದರ್ಶಿಸಿದರು.

# ಮುಖ್ಯಮಂತ್ರಿಗಳ ಪದಕ ಪಡೆದ ಸಂತೋಷ್ ದಯಾನಂದ ಸತ್ಯನಾಯಕ



**ಬೆಳಗಾವಿ ವಾರ್ತೆ**

**ಬೆಳಗಾವಿ :** ನಗರದ ಮಾರ್ಕೆಟ್ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ (ACP) ಸಂತೋಷ್ ದಯಾನಂದ ಸತ್ಯನಾಯಕ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಲಭಿಸಿದೆ. ಅವರ ಸುದೀರ್ಘ ಮತ್ತು ಶ್ಲಾಘನೀಯ ಸೇವೆಯನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ.

**ಈ ಕುರಿತಾದ ವಿವರವಾದ ಮಾಹಿತಿ ಇಲ್ಲಿದೆ:**

**ವೃತ್ತಿಜೀವನದ ಹಾದಿ;** ಶ್ರೀ ಸಂತೋಷ್ ಸತ್ಯನಾಯಕ ಅವರು ಜನವರಿ 11, 1999 ರಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (PSI) ಆಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಕಳೆದ 27 ವರ್ಷಗಳಿಂದ ಇಲಾಖೆಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವ ಇವರು ಹಂತಹಂತವಾಗಿ ಬಡ್ತಿ ಪಡೆದಿದ್ದಾರೆ: ಮೇ 4, 2021: ಪೊಲೀಸ್ ಇನ್ಸ್‌ಪೆಕ್ಟರ್ (PI) ಹುದ್ದೆಯಿಂದ ಉಪ ಪೊಲೀಸ್ ಅಧೀಕ್ಷಕ (DySP) ಹುದ್ದೆಗೆ ಬಡ್ತಿ. ಸೆಪ್ಟೆಂಬರ್ 4, 2024 ರಿಂದ: ಬೆಳಗಾವಿ ನಗರದ ಮಾರ್ಕೆಟ್ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾಗಿ (ACP) ಕಾರ್ಯನಿರ್ವಹಿಸುತ್ತಿದ್ದಾರೆ.

**ಪ್ರಮುಖ ಸಾಧನೆಗಳು ಮತ್ತು ಸೇವೆ:** ಅವರ ಸುದೀರ್ಘ ವೃತ್ತಿಜೀವನದಲ್ಲಿ ಶಿಸ್ತು, ಬದ್ಧತೆ ಮತ್ತು ವೃತ್ತಿಪರತೆಗೆ ಅವರು ಹೆಸರಾಗಿದ್ದಾರೆ. ಅವರ ಕೆಲವು ಪ್ರಮುಖ ಕಾರ್ಯಗಳು ಇಲ್ಲಿವೆ:

**ಕಾನೂನು ಮತ್ತು ಸುವ್ಯವಸ್ಥೆ:** ಗಂಭೀರ ಅಪರಾಧಗಳ ತನಿಖೆ ನಡೆಸಿ, ಪ್ರಮುಖ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುವಂತೆ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

**ಬಂದೋಬಸ್ತ್ ಕರ್ತವ್ಯ:** ಗಣೇಶೋತ್ಸವ, ಕರ್ನಾಟಕ ರಾಜ್ಯೋತ್ಸವ, ರಂಜಾನ್, ಬಕ್ರೀದ್ ಹಬ್ಬಗಳ ಸಂದರ್ಭದಲ್ಲಿ ಹಾಗೂ ಬೆಳಗಾವಿಯ ವಾರ್ಷಿಕ ಚಳಿಗಾಲದ ಅಧಿವೇಶನದ ಸಮಯದಲ್ಲಿ ಅತ್ಯಂತ ಜಾಗರೂಕತೆಯಿಂದ ಭದ್ರತಾ ವ್ಯವಸ್ಥೆಯನ್ನು ನಿರ್ವಹಿಸಿ ಶಾಂತಿ ಕಾಪಾಡಿದ್ದಾರೆ.

**ಅಪರಾಧ ಪತ್ತೆ:** ಅವರ ನೇತೃತ್ವದಲ್ಲಿ ಮಾರ್ಕೆಟ್ ಉಪವಿಭಾಗದ ಒಟ್ಟು 22 ಪ್ರಕರಣಗಳಲ್ಲಿ ಭರ್ಜರಿ ಯಶಸ್ಸು ಸಿಕ್ಕಿದ್ದು, ಸುಮಾರು 47,90,884 ರೂ ಮೌಲ್ಯದ 715.79 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ. **ಗೌರವ ಸನ್ಮಾನ:** ಸಾರ್ವಜನಿಕ ಸುರಕ್ಷತೆ, ಸಮರ್ಥ ನಾಯಕತ್ವ ಮತ್ತು ಕರ್ತವ್ಯದ ಮೇಲಿನ ಅಚಲ ನಿಷ್ಠೆಯನ್ನು ಪರಿಗಣಿಸಿ, ಕರ್ನಾಟಕ ಸರ್ಕಾರವು ಅವರಿಗೆ 2025ರ ಮುಖ್ಯಮಂತ್ರಿಗಳ ಪದಕವನ್ನು ಘೋಷಿಸಿದೆ.

# ಮಧ್ಯಮ ವಯಸ್ಸಿನ ಮಹಿಳೆಯರು ಎದುರಿಸುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಕಂಫರ್ಟ್ ಝೋನ್ ಬಿಟ್ಟು ಹೊಸ ದಾರಿಗೆ ಸಾಗಬೇಕು: ನಂದಿನಿ ಬಿಜ್ಜೂರ್

**ಬೆಳಗಾವಿ ವಾರ್ತೆ**

**ಧಾರವಾಡ:** ಮಹಿಳೆಯರಿಗೆ ಜೀವನದಲ್ಲಿ ಹೊಸ ಅನುಭವಗಳನ್ನು ಪಡೆಯಲು ತಮ್ಮ ಕಂಫರ್ಟ್ ಝೋನ್ ನಿಂದ ಹೊರಬರಬೇಕಾಗಿದೆ. ತಮ್ಮಗೆ ಎದುರಾಗುವ ಸಮಸ್ಯೆಗಳನ್ನು ಒಪ್ಪಿಕೊಳ್ಳದೆ, ಅವುಗಳಿಗೆ ಪರಿಹಾರ ಮಾರ್ಗಗಳನ್ನು ಯೋಚಿಸುವುದು ಅತ್ಯಂತ ಅಗತ್ಯವಿದೆ ಎಂದು ನಂದಿನಿ ಬಿಜ್ಜೂರ್ ಅವರು ಹೇಳಿದರು.

ಅವರು ಇಂದು (ಮಾ.27) ಶೆಟ್ಟರ್ ಕಾಲೋನಿಯ ಹುಕ್ಕೇರಿಕರ್ ನಗರದ ಓಂ ನಿವಾಸದಲ್ಲಿ ಜರುಗಿದ ಅಭ್ಯುದಯ ಫೌಂಡೇಶನ್ ಆಸ್ಥಾ ಮಹಿಳಾ ವೇದಿಕೆಯವರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರ ಮಧ್ಯ ವಯಸ್ಸಿನ ಸವಾಲುಗಳು ಬಗ್ಗೆ ಮಹಿಳೆಯರಿಗಾಗಿ ಒಂದು ದಿನದ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಷ್ಟಾಚಾರದ ಬಾಧ್ಯತೆಯನ್ನು ಗಮನದಲ್ಲಿ ಇಟ್ಟುಕೊಂಡು, ಯಾವತ್ತೂ ಅವರು ಹೀಗೆ, ಇವರು ಹೀಗೆ ಎಂದು ಜಡ್ಜೆಂಟ್ ಮಾಡುವುದಕ್ಕೆ ಹೋಗಬಾರದು. ಸಮಾಜದಲ್ಲಿ ಯಾರು ಏನನ್ನು ಹೇಳುತ್ತಾರೆ ಎಂಬುದನ್ನು ತಲೆ ಕೆಡಿಸಿಕೊಳ್ಳದೆ ನಮ್ಮ ಕೆಲಸ ಕಾರ್ಯವನ್ನು ನಾವು ಮುಂದುವರಿಸಬೇಕು. ಮತ್ತು ಮಹಿಳೆಯರು ತಮ್ಮ ಜೀವನದ ನಿರ್ಧಾರಗಳಲ್ಲಿ ಸ್ವತಂತ್ರವಾಗಿರಬೇಕು ಎಂದು ಅವರು ಹೇಳಿದರು. ಮಹಿಳೆಯರ ಮಧ್ಯಮ ವಯಸ್ಸಿನ ಸಮಸ್ಯೆಗಳ ನ್ನು ಸಹ ಸಮರ್ಥವಾಗಿ ಎದುರಿಸುವ ಜವಾಬ್ದಾರಿ ಇದ್ದು, ಸಮಸ್ಯೆ ನಡೆದದ್ದರಿಂದ ಜೀವನವೇ ಮುಗಿದಂತಾಗುವುದಿಲ್ಲ, ಬದಲಿಗೆ ಅದರ ಪರಿಹಾರ ಮಾರ್ಗಗಳನ್ನು ಹುಡುಕಬೇಕು. ಆರೋಗ್ಯದ ಮೇಲೂ ಸಮಾನ ಕಾಳಜಿಯನ್ನು ವಹಿಸಬೇಕೆಂದು ಅವರು ತಿಳಿಸಿದರು. ಕಾರ್ಯ ಕ್ರಮದಲ್ಲಿ ನೃತ್ಯಾ ದಿ ಡಾನ್ಸ ಅಕಾಡೆಮಿ ಯ ಅಧ್ಯಕ್ಷೆ ಸುನೀತಾ ದತ್ತವಾಡ್ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಸ್ಥಾ ಮಹಿಳಾ ವೇದಿಕೆ



ಯ ಅಧ್ಯಕ್ಷೆ ನಯನಾ ಗಂಗಾಧರ್ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಸಂಗೀತಾ ಗೋವಿಂದರಾಜ ನಿರೂಪಿಸಿ, ವಿಜಯಲಕ್ಷ್ಮಿ ಕಲಾದಗಿ ಅವರು ವಂದಿಸಿದರು.

# ವಸತಿ ನಿಲಯದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಧಾರವಾಡ: ಧಾರವಾಡ ಶಹರದ ಸಪ್ತಾಪೂರ ರಸ್ತೆಯಲ್ಲಿರುವ ಮಿಲಿಟರಿ ಬಾಲಕಿಯರ ವಸತಿ ನಿಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕಾಗಿ ಧಾರವಾಡ, ಗದಗ, ಹಾವೇರಿ ಮತ್ತು ಬಳ್ಳಾರಿ ಜಿಲ್ಲೆಗಳ ಗ್ರಾಮಾಂತರ ಪ್ರದೇಶ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಯುದ್ಧದಲ್ಲಿ ಮಡಿದ ಯೋಧರ ಮತ್ತು ಮಾಜಿ ಸೈನಿಕರ ಹೆಣ್ಣು ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಏಪ್ರಿಲ್ 30, 2026 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 5 ನೇ ತರಗತಿಯಿಂದ ಪಿಯುಸಿ – 2 ರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ವಸತಿ ನಿಲಯದಲ್ಲಿ ವಾಸ್ತವ್ಯ ಮತ್ತು ಊಟೋಪಚಾರಗಳು ಉಚಿತವಾಗಿದ್ದು, ಮಾಜಿ ಸೈನಿಕರ ಹೆಣ್ಣು ಮಕ್ಕಳು ಈ ಸೌಲಭ್ಯದ ಉಪಯೋಗ ಪಡೆಯಬಹುದಾಗಿರುತ್ತದೆ. ವಸತಿ ನಿಲಯದಲ್ಲಿ ಧಾರವಾಡ ನಗರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ನಿಲಯದಲ್ಲಿ ಪ್ರವೇಶ ನೀಡಲಾಗುವದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0836–2440176 ಗೆ ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಮೇಲುಗೈ – ಜನಪರ ಆಡಳಿತಕ್ಕೆ ಮತದಾರರ ಬೆಂಬಲ: ಗದಗ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ



**ಬೆಳಗಾವಿ ವಾರ್ತೆ**

**ಗದಗ:** ರಾಜ್ಯದ ಇತಿಹಾಸದಲ್ಲಿ ನಡೆದಿರುವ ವಿಧಾನಸಭಾ ಕ್ಷೇತ್ರಗಳ ಹಲವಾರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಜನಪರ ಆಡಳಿತಕ್ಕೆ ಮತದಾರರು ಬೆಂಬಲ ಸೂಚಿಸುತ್ತಲೇ ಬಂದಿದ್ದು, ಕಾಂಗ್ರೆಸ್ ಮೇಲುಗೈ ಸಾಧಿಸುತ್ತಲೇ ಬಂದಿದೆ. ಪ್ರಸ್ತುತ ನಡೆಯುವ ಉಪಚುನಾವಣೆಯಲ್ಲಿಯೂ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಲಿದೆ ಎಂದು ಗದಗ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಅಶೋಕ ಮಂದಾಲಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 2026ರ ಉಪ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಏಪ್ರಿಲ್ 9ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸಮರ್ಥ್ ಶಾಮನೂರು ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಮೇಶ ಮೇಟಿ ಅವರನ್ನು ಅಭ್ಯರ್ಥಿಗಳನ್ನಾಗಿ ಕಾಂಗ್ರೆಸ್ ಘೋಷಣೆ ಮಾಡಿದ್ದು, 2024ರ ನಡೆದ ಉಪಚುನಾವಣೆ ರೀತಿಯಲ್ಲಿ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ.

1989ರಲ್ಲಿ ಮೊದಲ ಬಾರಿಗೆ ಯಾವ ಪಕ್ಷವು ಪಡೆಯದಂತಹ 178 ಸ್ಥಾನಗಳ ಗೆಲುವಿನ ಮೂಲಕ ದಾಖಲೆ ಬರೆದು ಸಂಪೂರ್ಣ 5 ವರ್ಷ ಕಾಂಗ್ರೆಸ್ ಸರ್ಕಾರ ಅಧಿಕಾರ ನಡಿಸಿತ್ತು. ನಂತರ 1999ರಲ್ಲಿ 132 ಸ್ಥಾನಗಳಿಂದ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ಬೆಂಗಳೂರನ್ನು ವಿಶ್ವದ IT Hub ಮಾಡಿ ಕರ್ನಾಟಕದ ಅಭಿವೃದ್ಧಿಗೆ ಬುನಾದಿ ಹಾಕಿದರು.

2013ರಲ್ಲಿ 122 ಸ್ಥಾನಗಳಿಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅನ್ನಭಾಗ್ಯ ಯೋಜನೆಗಳಂತ ಬಡವರಿಗೆ ಸೌಭಾಗ್ಯ ನೀಡಿತ್ತು ಮತ್ತು 2023ರಲ್ಲಿ 135 ಸ್ಥಾನಗಳಿಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಿಶ್ವದ ಅತಿ ದೊಡ್ಡ ಆರ್ಥಿಕತೆ ಪುನಶ್ಚತನೆಯ ಗ್ಯಾರಂಟಿ ಯೋಜನೆಗಳನ್ನು ನೀಡಿ ಜನರಿಗೆ ಆರ್ಥಿಕ ಭದ್ರತೆ ನೀಡಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರದ ಅವಧಿಯಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಸಾಧಿಸಿದ್ದು 2024ರ ಮೇನಲ್ಲಿ ಶೋರಾಪೂರ ವಿಧಾನಸಭೆ ಮತ್ತು ನವೆಂಬರ್‌ನಲ್ಲಿ ಶಿಗ್ಗಾಂವಿ, ಸಂಡೂರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳು ಸೇರಿ ಒಟ್ಟು 4 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

2013–2018ರ ಸಿದ್ದರಾಮಯ್ಯನವರ ಮೊದಲ ಅವಧಿಯಲ್ಲಿ ನಡೆದ 10ಕ್ಕೂ ಹೆಚ್ಚು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಶೇ. 80ಕ್ಕಿಂತ ಹೆಚ್ಚು ಯಶಸ್ಸು ಗಳಿಸಿದೆ. 2017ರ ಉಪಚುನಾವಣೆಗಳಲ್ಲಿ ಬಿಜೆಪಿ ಪ್ರಬಲವಾಗಿದ್ದರೂ ಕಾಂಗ್ರೆಸ್ ನಂಜನಗೂಡು–21,000 ಮತ್ತು ಗುಂಡ್ಲುಪೇಟೆ–10,000 ಮತಗಳ ಅಂತರದಿಂದ ಜಯಗಳಿಸಿತ್ತು.

2014ರಿಂದ 2024ರ ವರೆಗೆ ನಡೆದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಶೇ. 65ರಷ್ಟು ಸ್ಥಾನಗಳನ್ನು ಗೆದ್ದಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದ ಉಪ ಚುನಾವಣೆಯ ಶೇ. 80ರಷ್ಟು ಸ್ಥಾನಗಳನ್ನು ಉಳಿಸಿಕೊಂಡಿದ್ದು 2024ರ ಅಂತ್ಯದಲ್ಲಿ ನಡೆದ ಚನ್ನಪಟ್ಟಣ, ಶಿಗ್ಗಾಂವಿ ಮತ್ತು ಸಂಡೂರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಶೇ. 100ರಷ್ಟು ಯಶಸ್ಸು ಸಾಧಿಸಿ ಕನ್ನಡಿಗರ ಮನ ಗೆದ್ದಿದೆ.

ಕಳೆದ 10 ವರ್ಷಗಳಲ್ಲಿ ನಡೆದ 25 ಪ್ರಮುಖ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಸುಮಾರು 18 ಸ್ಥಾನಗಳನ್ನು (ಶೇ. 72) ಗೆದ್ದಿದೆ. ಕಾಂಗ್ರೆಸ್ ಗೆದ್ದ 18 ಉಪಚುನಾವಣೆಗಳಲ್ಲಿ ಮಹಿಳಾ ಮತದಾನದ ಪ್ರಮಾಣವು ಪುರುಷರಿಗಿಂತ ಸರಾಸರಿ ಶೇ. 2.5ರಿಂದ 4ರಷ್ಟು ಹೆಚ್ಚಾಗಿದೆ. 2024ರ ಚನ್ನಪಟ್ಟಣ ಮತ್ತು ಶಿಗ್ಗಾಂವಿ ಉಪಚುನಾವಣೆಗಳಲ್ಲಿ 'ಗೃಹಲಕ್ಷ್ಮಿ', ಅನ್ನಭಾಗ್ಯ, ಗೃಹಜ್ಯೋತಿ, 'ಶಕ್ತಿ' ಹಾಗೂ ಯುವನಿಧಿಯಂತಹ ಪಂಚ ಗ್ಯಾರಂಟಿ ಯೋಜನೆಗಳ ಫಲವಾಗಿ ಮಹಿಳಾ ಮತದಾರರ ಒಲವು ಕಾಂಗ್ರೆಸ್ ಪರ ಶೇ. 12ರಷ್ಟು ಹೆಚ್ಚಾಗಿದ್ದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬೂತ್‌ಗಳಿಗೆ ಬಂದು ಕಾಂಗ್ರೆಸ್ ಪರ ಮತ ಚಲಾಯಿಸಿರುವುದು ಗೆಲುವಿನ ಅಂತರ ವನ್ನು 15,000 ದಾಟಿಸಲು ಸಹಕಾರಿಯಾಗಿದೆ.

ಸಾಮಾನ್ಯವಾಗಿ ಆಡಳಿತ ಪಕ್ಷವು ಉಪಚುನಾವಣೆಯಲ್ಲಿ ಗೆಲ್ಲುತ್ತದೆ ಎಂಬ ಕಲ್ಪನೆಯನ್ನು ಸುಳ್ಳು ಮಾಡಿ 2021ರಲ್ಲಿ ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗಲೂ, ಹಾನಗಲ್‌ನಲ್ಲಿ ಕಾಂಗ್ರೆಸ್ ತನ್ನ ಮತದಾರರ ಪಾಲನ್ನು ಶೇ. 43ರಿಂದ ಶೇ. 48.5ಕ್ಕೆ ಹೆಚ್ಚಿಸಿಕೊಂಡು ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ಮಾನೆ ಅವರು 7,373 ಮತಗಳ ಅಂತರದಿಂದ ಜಯಗಳಿಸಿ ಆಡಳಿತ ಪಕ್ಷಕ್ಕೆ ದೊಡ್ಡ ಆಘಾತ ನೀಡಿದ್ದರು.

2026ರ ಉಪಚುನಾವಣೆಯ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಮತಗಳು ಒಟ್ಟಾಗಿ ಈ ಎರಡೂ ಕ್ಷೇತ್ರಗಳಲ್ಲಿ ಸುಮಾರು ಶೇ. 65ಕ್ಕಿಂತ ಹೆಚ್ಚಿದ್ದು, ಇದು ಕಾಂಗ್ರೆಸ್‌ನ ಭದ್ರಕೋಟೆಯಾಗಿದೆ.

ಕಳೆದ 30 ವರ್ಷಗಳಲ್ಲಿ ಕಾಂಗ್ರೆಸ್ ಕನಿಷ್ಠ 3 ಬಾರಿ 120ಕ್ಕೂ ಹೆಚ್ಚು ಸ್ಥಾನಗಳು ಗೆದ್ದು ಸ್ಪಷ್ಟ ಬಹುಮತ (1999, 2013, 2023) ಪಡೆದಿದ್ದು ಕನ್ನಡಿಗರ ಮನ ಗೆದ್ದಿದು ಕಾಂಗ್ರೆಸ್ ಪಕ್ಷ ಮಾತ್ರ. ಆದರೆ ಬಿಜೆಪಿ ಅತೀ ಹೆಚ್ಚು ಸ್ಥಾನ ಗೆದ್ದಾಗಲೂ (2008ರಲ್ಲಿ 110 ಮತ್ತು 2018ರಲ್ಲಿ 104) ಬಹುಮತ ಸಾಧಿಸಲು 113 ಸ್ಥಾನ ದಾಟಲು ಸಾಧ್ಯವಾಗಿಲ್ಲ.

ಕಾಂಗ್ರೆಸ್ ಸರ್ಕಾರಗಳು ಬಹುಮತದೊಂದಿಗೆ ಅಧಿಕಾರಕ್ಕೆ ಬಂದಾಗ ಪೂರ್ಣಾವಧಿ ಪೂರೈಸುವಲ್ಲಿ ಯಶಸ್ವಿಯಾಗಿದೆ (1999 ರಿಂದ 2004 – ಎಸ್.ಎಂ. ಕೃಷ್ಣ, 2013ರಿಂದ 2018–ಸಿದ್ದರಾಮಯ್ಯ). ಆದರೆ ಬಿಜೆಪಿ ಆಡಳಿತದಲ್ಲಿ ಭ್ರಷ್ಟಚಾರದಿಂದ ಸಾಲು ಸಾಲು ಮುಖ್ಯಮಂತ್ರಿಗಳ ಬದಲಾವಣೆ ಮಾಡಿರುವುದು ಗಮನಾರ್ಹ ವಿಷಯವಾಗಿದೆ. ಒಟ್ಟಿನಲ್ಲಿ ರಾಜ್ಯದ ಉಪಚುನಾವಣೆ ಗಳಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸುತ್ತ ಬಂದಿದ್ದು, ಪ್ರಸ್ತುತ ನಡೆಯುತ್ತಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳಾದ ಸಮರ್ಥ ಶಾಮನೂರ ಹಾಗೂ ಉಮೇಶ ಮೇಟಿ ಅವರು ಗೆಲ್ಲುವ ಮೂಲಕ ಕಾಂಗ್ರೆಸ್ ಮತ್ತೆ ಮೇಲುಗೈ ಸಾಧಿಸಲಿದೆ.

## ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ:

2008ರ ಕ್ಷೇತ್ರ ಮರುವಿಂಗಡಣೆಯ ನಂತರ ಮೂಲ ದಾವಣಗೆರೆ ವಿಧಾನಸಭಾ ಕ್ಷೇತ್ರವನ್ನು ವಿಭಜಿಸಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವನ್ನು ರಚಿಸಲಾಯಿತು. ಮಧ್ಯ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯಿಂದ ದಾವಣಗೆರೆಯನ್ನು ಪ್ರತ್ಯೇಕಿಸಿ ಹೊಸ ಜಿಲ್ಲೆಯನ್ನಾಗಿ ಮಾಡಲಾಗಿತ್ತು. ಮತ್ತು ಇದು ದಾವಣಗೆರೆ ಲೋಕಸಭಾ ಕ್ಷೇತ್ರದ ಭಾಗವಾಗಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಸರಿಸುಮಾರು 2.10ರಿಂದ 2.15 ಲಕ್ಷ ಮತದಾರರಿದ್ದು 1.08 ಲಕ್ಷ ಪುರುಷರು, 1.02 ಲಕ್ಷ ಮಹಿಳೆಯರು ಮತ್ತು ಅಲ್ಪ ಪ್ರಮಾಣದಲ್ಲಿ ಇತರ ವರ್ಗದ ಮತದಾರರಿದ್ದಾರೆ. 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸುಮಾರು 27,888 ಮತಗಳ ಭರ್ಜರಿ ಅಂತರದಿಂದ ಜಯಗಳಿಸಿತ್ತು. ಚುನಾವಣೆಯಲ್ಲಿ ಸುಮಾರು ಶೇ. 69ರಷ್ಟು ಮತದಾನವಾಗಿದ್ದು ಕಾಂಗ್ರೆಸ್ ಅಭ್ಯರ್ಥಿಯು ಶೇ. 58ರಷ್ಟು ಮತಗಳನ್ನು ಪಡೆಯುವ ಮೂಲಕ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದರು. 2018ರ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷವು ಸುಮಾರು 15,884 ಮತಗಳ ಅಂತರದಿಂದ ಜಯಗಳಿಸಿತ್ತು. ಕಾಂಗ್ರೆಸ್ ಒಟ್ಟು ಶೇ. 52ರಷ್ಟು ಮತಗಳನ್ನು ಪಡೆದರೆ, ಬಿಜೆಪಿ ಪ್ರಬಲ ಪೈಪೋಟಿ ನೀಡಿತ್ತು.

2013ರ ಚುನಾವಣೆಯಲ್ಲಿ ಶ್ರೀ ಶಾಮನೂರು ಶಿವಶಂಕರಪ್ಪನವರು ತಮ್ಮ ವೃತ್ತಿಜೀವನದ ಅತಿದೊಡ್ಡ ಜಯವನ್ನು ದಾಖಲಿಸಿದ್ದರು. ಅವರು ಸುಮಾರು 40,158 ಮತಗಳ ಬೃಹತ್ ಅಂತರದಿಂದ ಜಯಗಳಿಸಿದ್ದರು.

## ಬಾಗಲಕೋಟೆ ದಕ್ಷಿಣ ವಿಧಾನಸಭಾ ಕ್ಷೇತ್ರ:

ಬಾಗಲಕೋಟೆಯು ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿರುವ ಒಂದು ಸಾಮಾನ್ಯ ವಿಧಾನಸಭಾ ಕ್ಷೇತ್ರವಾಗಿದ್ದು, ಇದು ಬಾಗಲಕೋಟೆ ಲೋಕಸಭಾ ಕ್ಷೇತ್ರದ ಭಾಗವಾಗಿದೆ. ಬಾಗಲಕೋಟೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು ಮತದಾರರ ಸಂಖ್ಯೆ ಸರಿಸುಮಾರು 2.25ರಿಂದ 2.30 ಲಕ್ಷ ಇದ್ದು, ಸುಮಾರು 1.15 ಲಕ್ಷ ಪುರುಷರು ಮತ್ತು 1.10 ಲಕ್ಷ ಮಹಿಳೆಯರಿದ್ದಾರೆ.

2023ರ ಚುನಾವಣೆಯಲ್ಲಿ ಕಾಂಗ್ರೆಸ್ ಸುಮಾರು 15,000–18,000 ಮತಗಳ ಸ್ಪಷ್ಟ ಅಂತರದಿಂದ ಜಯಗಳಿಸಿತ್ತು. ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ (OBC) ಮತಗಳ ಕ್ರೋಢೀಕರಣದಿಂದಾಗಿ ಸುಮಾರು ಶೇ. 50–52ರಷ್ಟು ಮತಗಳನ್ನು ಪಡೆದು ಬಿಜೆಪಿಯನ್ನು ಸೋಲಿಸಿತ್ತು.

# ಹಿರಿಯ ನ್ಯಾಯವಾದಿ ಗವಿಸಿದ್ದಪ್ಪ ಕೋರಿ, ಅನುಸೂಯಾ ಕೋರಿ ಅವರಿಗೆ ಕರ್ನಾಟಕ ಭೂಷಣ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



**ಬೆಳಗಾವಿ ವಾರ್ತೆ**

**ವಿಜಯಪುರ:** ಜಿಲ್ಲೆಯ ಖ್ಯಾತ ಹಿರಿಯ ನ್ಯಾಯವಾದಿ.ನಿವೃತ ಡಿಸಿ ಸಿ ಬ್ಯಾಂಕ್ ವ್ಯಸ್ಥಾಪಕರಾದ ಗವಿಸಿದ್ದಪ್ಪ.ವಿ.ಕೋರಿ ಹಾಗೂ ಅವರ ಧರ್ಮ ಪತ್ನಿ ಶ್ರೀಮತಿ ಅನಸೂಯಾ.ಗ.ಕೋರಿ ಅವರಿಗೆ ಬೆಂಗಳೂರಿನ ಶ್ರೀ ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್ (ರಿ) ಬೆಂಗಳೂರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ವಿಜಯಪುರ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಜರುಗಿದ ಸಾಂಸ್ಕೃತಿಕ ಜನಪದ ವೈಭವ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅದ್ದೂರಿ ವೇದಿಕೆಯಲ್ಲಿ ಖ್ಯಾತ ಹಿರಿಯ ನ್ಯಾಯವಾದಿ. ಕೊಪ್ಪಳ ಜಿಲ್ಲಾ ನಿವೃತ ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಗವಿಸಿದ್ದಪ್ಪ. ವಿ.ಕೋರಿ ಹಾಗೂ ಅವರ ಧರ್ಮ ಪತ್ನಿ ಶ್ರೀಮತಿ ಅನುಸೂಯಾ.ಗ.ಕೋರಿ ಅವರನ್ನು ಸಾಮಜಿಕ.ಸಹಕಾರಿ.

ಧಾರ್ಮಿಕ.ನ್ಯಾಯಾಂಗ ಕ್ಷೇತ್ರದ ಅಪಾರ ಸೇವೆ ಪರಿಗಣಿಸಿ ದಂಪತಿಗಳನ್ನು "ಕರ್ನಾಟಕ ಭೂಷಣ" ರಾಷ್ಟ್ರೀಯ ಪ್ರಶಸ್ತಿಯನ್ನು.ವಿಶ್ವಗುರು ಶ್ರೀ ಬಸವಣ್ಣ ಹಾಗೂ ವೀರ ರಾಣಿ ಕಿತ್ತೂರು ಚೆನ್ನಮ್ಮಳ ಸ್ಮರಣಿಕೆ.ಪ್ರಶಸ್ತಿ ಪತ್ರ. ಶಾಲು ಹೊದಿಸಿ ಫಲಪುಷ್ಪ ವಿತರಿಸಿ ಗೌರವಿಸಲಾಯಿತು. ಈ ಸಂಧರ್ಭದಲ್ಲಿ ಶ್ರೀ ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್ ನಾ ಅಧ್ಯಕ್ಷೆ ಲಕ್ಷ್ಮಿತಾ ಗಂಗಾವತಿ.ಯುವ ಧುರೀಣ ರಾಜು ಕಂಕಣವಾಡಿ.ನ್ಯಾಯವಾದಿ ದಾನೇಶ್ ಅವಟಿ ಮುಂತಾದವರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತ ದಂಪತಿಗಳನ್ನು ಅಭಿನಂದಿಸಿದ್ದಾರೆ.




ವಿಜಯನಗರ(ಹೊಸಪೇಟೆ): ನಗರದ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಉಪ ವಿಭಾಗ ಮಟ್ಟದ ದೌರ್ಜನ್ಯ ಹಾಗೂ ಸಫಾಯಿ ಕರ್ಮಚಾರಿಗಳ ಪ್ರಥಮ ತ್ರೈಮಾಸಿಕ ನಿಗಾ ಸಮಿತಿ ಸಭೆ ನಡೆಸಲಾಯಿತು. ಸಭೆಯಲ್ಲಿ ಉಪ ವಿಭಾಗಾಧಿಕಾರಿ ಪಿ.ವಿವೇಕಾನಂದ, , ಸಮಾಜ ಕಲ್ಯಾಣ ಇಲಾಖೆಸಹಾಯಕ ನಿರ್ದೇಶಕ ಶಾಹೇಖಾ ಅಹಮದಿ, ಸಮಿತಿಯ ನಾಮ ನಿರ್ದೇಶಿತ ಸದಸ್ಯರಾದ ರಾಘವೇಂದ್ರ, ಎನ್.ರಘು, ಡಿ.ರವಿಶಂಕರ್, ಮಿರ್ಜಾ ಅಲಿ ಬೇಗ್ ಸೇರಿದಂತೆ ಮತ್ತಿತರರು ಇದ್ದರು.

# ಜಿಲ್ಲಾ ಮಟ್ಟದ ಸಾಮಾಜಿಕ ನ್ಯಾಯ ಅರಿವು ಕಾರ್ಯಕ್ರಮ

## ಸಾಮಾಜಿಕ ನ್ಯಾಯದ ಅರಿವು ಪ್ರತಿಯೊಬ್ಬರಿಗೂ ಅತ್ಯಂತ ಅಗತ್ಯ : ಸಿದ್ರಾಮೇಶ್ವರ್



**ಬೆಳಗಾವಿ ವಾರ್ತೆ**

**ಕೊಪ್ಪಳ:** ಸಮಾಜದಲ್ಲಿ ಸಾಮಾಜಿಕ ಸಮಾನತೆ, ಹಕ್ಕುಗಳ ರಕ್ಷಣೆ ಹಾಗೂ ದುರ್ಬಲ ವರ್ಗಗಳ ಸಬಲೀಕರಣಕ್ಕೆ ಸಾಮಾಜಿಕ ನ್ಯಾಯ ಅತ್ಯಂತ ಅಗತ್ಯ, ಅಧಿಕಾರಿಗಳು ಕಛೇರಿ ಸಿಬ್ಬಂದಿಯನ್ನು ಸಮಾನ ರೀತಿಯಲ್ಲಿ ಕಾಣಬೇಕು. ನಾವು ಸಾಮಾಜಿಕ ಸಮಾನತೆಯ ಜೊತೆಗೆ ಕಾರ್ಯನಿರ್ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಹೇಳಿದರು.

ಅವರು ಶುಕ್ರವಾರದಂದು ಡಾ. ಬಿ.ಆರ್. ಅಂಬೇಡ್ಕರ್ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಕೇಂದ್ರ ಆಡಳಿತ ತರಬೇತಿ ಸಂಸ್ಥೆ, ಮೈಸೂರು ರವರ ಪ್ರಾಯೋಜಕತ್ವದಲ್ಲಿ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ತರಬೇತಿ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪಂಚಾಯತ್‌ನ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಮಾಜಿಕ ನ್ಯಾಯದ ಕುರಿತು ಒಂದು ದಿನದ ಜಿಲ್ಲಾ ಮಟ್ಟದ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ನಾಗರಿಕನು ತನ್ನ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಅರಿತುಕೊಳ್ಳಬೇಕು, ಸಾಮಾಜಿಕ ನ್ಯಾಯವೆಂದರೆ ಕೇವಲ ಕಾನೂನಿನ ಅಂಶವಲ್ಲ, ಅದು ಸಮಾಜದ ಪ್ರಗತಿಗೆ ಮೂಲಭೂತ ಸ್ತಂಭವಾಗಿದೆ. ಸರ್ಕಾರದ ವಿವಿಧ ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಾರ್ವಜನಿಕರಿಗೆ ಅಧಿಕಾರಿಗಳು ತಿಳಿಸಬೇಕು ಅಂದಾಗ ಮಾತ್ರ ಸಮಾಜದಲ್ಲಿ ಸಮಾನತೆ ಕಾಣಲು ಸಾಧ್ಯ ಎಂದರು.

ಗದಗಿನ ಜಿಲ್ಲಾ ತರಬೇತಿ ಸಂಸ್ಥೆಯ ಉಪ ಪ್ರಾಚಾರ್ಯರಾದ ಪಾಪಣ್ಣ ಐ.ಜಿ ಅವರು ಮಾತನಾಡಿ, ಸುಸ್ಥಿರ ಸಮಾಜ, ಸಾಮಾಜಿಕ ನ್ಯಾಯದ ಮಹತ್ವ ಮತ್ತು ಪರಿಕಲ್ಪನೆಗಳು ಕುರಿತು ಹಾಗೂ ಸಮಾಜದಲ್ಲಿನ ಜಾತಿ, ಲಿಂಗ, ಧರ್ಮ ಮತ್ತು ವರ್ಗ ಆಧಾರಿತ ಭೇದಭಾವವನ್ನು ನಿವಾರಿಸುವುದು ಸಾಮಾಜಿಕ ನ್ಯಾಯದ ಮುಖ್ಯ ಉದ್ದೇಶವಾಗಿದೆ. ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಆರ್ಥಿಕ ಅವಕಾಶಗಳು ದೊರೆಯಬೇಕು ಎಂಬುದು ಆರ್ಥಿಕ ನ್ಯಾಯದ ಮೂಲ ತತ್ವ, ಮತ್ತು ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಹಕ್ಕು, ಸಮಾನ ರಾಜಕೀಯ ಭಾಗವಹಿಸುವಿಕೆ ಹಾಗೂ ಆಡಳಿತದಲ್ಲಿ ಪ್ರತಿನಿಧಿತ್ವ ಸಿಗುವುದು ರಾಜಕೀಯ ನ್ಯಾಯದ ಮೂಲವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯವಾಗಿದ್ದು, ಸಂವಿಧಾನ ನೀಡಿರುವ ಹಕ್ಕುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಕೊಪ್ಪಳ ಡಿವೈಎಸ್‌ಪಿ ಮುತ್ತಣ್ಣ ಸವರಗೋಳ ಅವರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ 1989ರ ಇತ್ತೀಚಿನ ತಿದ್ದುಪಡಿಗಳನ್ನು ಮತ್ತು ಸಂವಿಧಾನದ 17ನೇ ವಿಧಿ, ಮಕ್ಕಳ ಹಕ್ಕುಗಳು ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012, ಭಾರತ ಸಂವಿಧಾನದ ಭಾಗ–3ರಲ್ಲಿ ಅನುಚ್ಛೇದ 12 ರಿಂದ 35 ರವರೆಗೆ ಮೂಲಭೂತ ಹಕ್ಕುಗಳು, ಭಾಗ–4 ರಲ್ಲಿ (ಎ) ಅನುಚ್ಛೇದ 51(ಎ) 11 ಮೂಲಭೂತ ಕರ್ತವ್ಯಗಳು (1976ರ 42ನೇ ತಿದ್ದುಪಡಿ) ಸೇರಿದಂತೆ ವಿವಿಧ ಸಾಮಾಜಿಕ ನ್ಯಾಯದ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಡಿ.ಡಿ.ಪಿ.ಐ ಸೋಮಶೇಖರ್, ಕೊಪ್ಪಳದ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಗಂಗಾವತಿಯ ಕ್ಷೇತ್ರ ಶಿಕ್ಷಣ ಅಧಿಕಾರಿ ನಟೇಶ್, ಜಿಲ್ಲಾ ಪಂಚಾಯತ ಯೋಜನಾ ವಿಭಾಗದ ಬಸಪ್ಪ, ಗಂಗಾವತಿಯ ತೋಟಗಾರಿಕಾ ಇಲಾಖೆಯ ಮಣಿಕಂಠ, ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಬಿ.ಎಸ್. ಸತ್ಯನಾರಾಯಣ, ಯಲಬುರ್ಗಾ ಸಾಮಾಜಿಕ ಅರಣ್ಯ ವಲಯದ ಬಸವ ರಾಜ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

# ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮ

ಗಂಗಾವತಿ : ನಗರದ ಶ್ರೀ ಚನ್ನಬಸವಸ್ವಾಮಿ ಕಲ್ಯಾಣ ಮಂಟಪ, ಗಂಗಾವತಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಭೂ ಮಂಡಲದಲ್ಲಿ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಸಂಕಲ್ಪದಿಂದ ವೀರಶೈವ ಧರ್ಮವನ್ನು ಸಂಸ್ಥಾಪಿಸಿದರು.



ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಹಾಗೂ ಧುರ್ವಾಸ ಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ ಉದ್ದರಿಸಿದರು. ಶ್ರೀ ಜಗದ್ಗುರು ರೇಣುಕಾಚಾರ್ಯರ ಸತ್ಕ್ರಾಂತಿಗಳು ಮಾನವ ಸಂಕುಲಕ್ಕೆ ಹೊಸ ಚೈತನ್ಯವನ್ನು ತುಂಬಿದವು. ಅಂಥಹ ಮಹಾನ್ ಶಕ್ತಿಯ ಅವತಾರ ದಿನವನ್ನು ಜಯಂತಿ ಯುಗಮಾನೋತ್ಸವವನ್ನಾಗಿ ಮಾರ್ಚ್ 29ರ ರವಿವಾರದಂದು ಆಚರಿಸಲಾಗು ವುದು.

ಬೆಳಿಗ್ಗೆ 7 ಗಂಟೆಯಿಂದ 108 ಕುಂಭ, ಕಳಸ, ಸಕಲ ವಾದ್ಯ ಮೇಳಗಳೊಂದಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರರ ಭಾವಚಿತ್ರ ಮೆರವಣಿಗೆಯು ಶ್ರೀ ಕಲ್ಮಠ ದಿಂದ ಬಸವಣ್ಣ ಸರ್ಕಲ್, ಗಾಂಧಿ ಸರ್ಕಲ್ ಮಾರ್ಗವಾಗಿ ಸಂಚರಿಸಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿ ಮಠಕ್ಕೆ ಬಂದು ನಂತರ ಶ್ರೀ ಚನ್ನಬಸವಸ್ವಾಮಿ ಕಲ್ಯಾಣ ಮಂಟಪದಲ್ಲಿ 12–ಮ.30ಕ್ಕೆ ಧರ್ಮ ಜಾಗೃತಿ ಸಭೆ ನಡೆಯುವುದು.

ಸಭೆಯ ನಂತರ ಪ್ರಸಾದ ವ್ಯವಸ್ಥೆ ಇರುತ್ತದೆ. ಈ ಸಮಾರಂಭದಲ್ಲಿ ಹರ–ಗುರು–ಚರಮೂರ್ತಿಗಳು, ವೀರಶೈವ ಬಾಂಧವರು, ಸಕಲ ಭಕ್ತಾಧಿಗಳು,

ರಾಜಕೀಯ ಧುರೀಣರು, ಎಲ್ಲಾ ಸಮಾಜದ ಗಣ್ಯ ಮಾನ್ಯರು ಭಾಗವಹಿಸುವರು, ಆದಕಾರಣ ಎಲ್ಲರೂ ತನು–ಮನ–ಧನಗಳ ಸಹಾಯ ಸಹಕಾರದೊಂದಿಗೆ ಭಾಗವಹಿಸಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಕೃಪಾ ಕಾರುಣ್ಯಕ್ಕೆ ಪಾತ್ರರಾಗಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಸೇವ ಕಮಿಟಿ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ಪ್ರಕಟಣೆ ತಿಳಿಸಿದ್ದಾರೆ.

# ಕಿನ್ನಾಳ ಕಲೆಯಂತಹ ವಿಷಯಗಳ ಕುರಿತು ಹೆಚ್ಚು ಹೆಚ್ಚು ತರಬೇತಿಗಳನ್ನು ನೀಡಿ: ಜಿಲ್ಲಾಧಿಕಾರಿ ಡಾ. ಸುರೇಶ್ ಬಿ.ಇಟ್ನಾಳ

**ಬೆಳಗಾವಿ ವಾರ್ತೆ**

ಕೊಪ್ಪಳ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಕಿನ್ನಾಳ ಕಲೆಯಂತಹ ವಿಷಯಗಳ ಕುರಿತು ಹೆಚ್ಚು ಹೆಚ್ಚು ತರಬೇತಿಗಳನ್ನು ನೀಡಬೇಕು. ಸ್ಥಳೀಯ ಕಲೆಗಳಿಂದ ಉದ್ಯಮ ಕಟ್ಟಿಕೊಳ್ಳುವ ಕುರಿತು ತರಬೇತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ ಅವರು ಆರ್‌ಸೆಟಿ ಸಂಸ್ಥೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಗುರುವಾರದಂದು ತಮ್ಮ ಕಛೇರಿಯಲ್ಲಿ ಕೊಪ್ಪಳದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ (ಆರ್‌ಸೆಟಿ) ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಸಂಸ್ಥೆಯಲ್ಲಿ ತರಬೇತಿಗಳನ್ನು ಪಡೆದ ಯುವಜನರಿಗೆ ಉದ್ಯೋಗ ಸೌಲಭ್ಯಗಳು ಸಿಗುವಂತಹ ವಾತಾವರಣವನ್ನು ನಿರ್ಮಿಸುವಂತೆ ಮತ್ತು ಫೋಟೋಗ್ರಫಿ ಬಗ್ಗೆ, ಕಿನ್ನಾಳ



ಕಲೆ ಸೇರಿದಂತೆ ಜಿಲ್ಲೆಯ ಯುವಜನರ ಅವಶ್ಯಕತೆ ಹಾಗೂ ಸಾರ್ವಜನಿಕರ ಆಸಕ್ತಿಗೆ ಅನುಗುಣವಾಗಿ ತರಬೇತಿ ವಿಷಯಗಳನ್ನು ಆಯ್ಕೆ ಮಾಡಿ ಕೊಂಡು ತರಬೇತಿಯನ್ನು ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆರ್‌ಸೆಟಿ ತರಬೇತಿ ಕೇಂದ್ರದಲ್ಲಿ ವರ್ಷದ 365 ದಿನವೂ ತರಬೇತಿಗಳನ್ನು ನೀಡಬೇಕು ಎಂಬ ನಿಯಮವಿದೆ. ಅದರಂತೆ ಹೈನುಗಾರಿಕೆ, ಕೋಳಿ ಹಾಗೂ ಕುರಿ ಸಾಗಾಣಿಕೆ, ಜೇನು ಕೃಷಿ, ಅಣಬೆ ಕೃಷಿ, ಟೈಲರಿಂಗ್, ಉಪ್ಪಿನಕಾಯಿ ತಯಾರಿಕೆ, ಮೊಬೈಲ್ ರಿಪೇರಿ ಸೇರಿದಂತೆ ಜಿಲ್ಲೆಯ ಜನರ ಬೇಡಿಕೆ, ಆಸಕ್ತಿ ಏನು ಎಂಬುದನ್ನು ಅರಿತು ಅದಕ್ಕೆ ಅನುಗುಣವಾಗಿ ತರಬೇತಿ ವಿಷಯವನ್ನು ಆಯ್ಕೆ ಮಾಡಿಕೊಳ್ಳಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕರಾದ ಮಾರುತಿ ಕೆ. ಹಾಗೂ ವಿರೇಶ್, ಸಿದ್ದಯ್ಯ, ಹರೀಶ್ ಸಾಲಿ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಜನಗಣತಿ ಕಾರ್ಯಕ್ರಮಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

**ಬೆಳಗಾವಿ ವಾರ್ತೆ**

**ಕೊಪ್ಪಳ:** 2026ರ ಏಪ್ರಿಲ್ 1 ರಿಂದ ಪ್ರಾರಂಭವಾಗಲಿರುವ ಜನಗಣತಿ– 2027 ಕಾರ್ಯವನ್ನು ಕೊಪ್ಪಳ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಲು ಜಿಲ್ಲಾಡಳಿತದಿಂದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಜನಗಣತಿ ಅಧಿಕಾರಿಗಳು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ "ಜನಗಣತಿ ಕಾರ್ಯ–2027 ಮತ್ತು ಪೆಟ್ರೋಲ್, ಡಿಸೇಲ್, ಗ್ಯಾಸ್ ಹಾಗೂ ಇತರೆ ವಿಷಯಗಳ" ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯುನ್ನುದ್ದೇಶಿಸಿ ಮಾತನಾಡಿದರು.



ಕೇಂದ್ರ ಸರ್ಕಾರವು 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಅದರನ್ವಯ ಮೊದಲ ಹಂತವಾದ ಸ್ವಯಂ ಗಣತಿ ಹಾಗೂ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವನ್ನು 2026ರ ಏಪ್ರಿಲ್ ಮತ್ತು ಮೇ 2026ರ ಮಾಹೆಗಳಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿರುತ್ತದೆ. ಜನಗಣತಿ ಕಾರ್ಯದ ಭಾಗವಾಗಿ ಸ್ವಯಂ ಗಣತಿ ಕಾರ್ಯವನ್ನು ಏಪ್ರಿಲ್ 1 ರಿಂದ ಏ. 15ರ ವರೆಗೆ ಹಾಗೂ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯವನ್ನು ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಏಪ್ರಿಲ್ 16 ರಿಂದ ಮೇ 15ರವರೆಗೆ ನಿಗದಿಪಡಿಸಿ ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಜನಗಣತಿಯನ್ನು ಜನಗಣತಿ ಕಾಯ್ದೆ–1948 ರನ್ವಯ ಮಾಡಲಾಗುತ್ತಿದೆ ಎಂದರು.

ಕಾಲ ವೆಬ್ ಪೋರ್ಟಲ್ ಜನಗಣತಿ–2027 ಸಂಪೂರ್ಣ ಡಿಜಿಟಲ್ ಜನಗಣತಿ ಯಾಗಿದ್ದು, ಮೊಬೈಲ್ ಆಪ್ ಮತ್ತು ವೆಬ್ ಪೋರ್ಟಲ್ ಮುಖಾಂತರ ಗಣತಿ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಹೆ (Phase-I, House listing and Housing Census (HLO)) ರಲ್ಲಿ ಮೊದಲ 15 ದಿನಗಳ (https://se.census.gov.in) ಮೂಲಕ ಸ್ವಯಂ–ಗಣತಿ (ಎ???) ಗೆ ಅವಕಾಶವಿರುತ್ತದೆ. ಅದರಂತೆ ಮನೆಯ ಯಾವುದೇ ಸದಸ್ಯರು 15 ರಿಂದ 20 ನಿಮಿಷಗಳ ಅವಧಿಯಲ್ಲಿ ಸ್ವಯಂ–ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್ ಅಥವಾ ಇಮೇಲ್ ನಲ್ಲಿ ಸ್ವಯಂ–ಗಣತಿ ಐಡಿ (J???Lr)ಯನ್ನು ಪಡೆಯಬಹುದಾಗಿದೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ, ಧೃಢೀಕರಿಸಲು ಮತ್ತು ಸ್ವಯಂ–ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಎಸ್ ಐಡಿ ಯನ್ನು ಅವರೊಂದಿಗೆ ಹಂಚಿಕೊಳ್ಳಬೇಕಾಗಿರುತ್ತದೆ ಎಂದು ಹೇಳಿದರು.

ಗಣತಿದಾರರು ಏಪ್ರಿಲ್ 16 ರಿಂದ ಮೇ 15ರ ವರೆಗೆ ತಮಗೆ ಹಂಚಿಕೆ ಮಾಡಲಾದ ಬ್ಲಾಕ್‌ಗಳಲ್ಲಿ ಮನೆ–ಮನೆಗೆ ಭೇಟಿ ನೀಡಿ ನಿಗದಿತ ನಮೂನೆಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಜನಗಣತಿ ಕಾರ್ಯ 2027ರ ನಿರ್ವಹಣೆಗಾಗಿ ವಿವಿಧ ಅಧಿಕಾರಿಗಳನ್ನು ನೇಮಿಸಲಾಗಿರುತ್ತದ್ದು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅಪರ ಪ್ರಧಾನ ಜನಗಣತಿ ಅಧಿಕಾರಿಯಾಗಿ, ಅಪರ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಜನಗಣತಿ ಅಧಿಕಾರಿಯಾಗಿ, ಉಪವಿಭಾಗಾಧಿಕಾರಿಗಳನ್ನು ಉಪವಿಭಾಗೀಯ ಜನಗಣತಿ ಅಧಿಕಾರಿಯಾಗಿ, ತಾಲ್ಲೂಕಿನ ಎಲ್ಲ ತಹಶೀಲ್ದಾರರನ್ನು ಆಯಾ ತಾಲ್ಲೂಕುಗಳ ಗ್ರಾಮೀಣ ಭಾಗಗಳಿಗೆ ಚಾರ್ಜ ಜನಗಣತಿ ಅಧಿಕಾರಿಗಳನ್ನಾಗಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು ಹಾಗೂ ಮುಖ್ಯಾಧಿಕಾರಿಗಳನ್ನು ಆಯಾ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ಚಾರ್ಜ ಜನಗಣತಿ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಗಂಗಾವತಿ ಗ್ರಾಮಾಂತರ, ಗಂಗಾವತಿ ನಗರ, ಕನಕಗಿರಿ ಗ್ರಾಮಾಂತರ, ಕನಕಗಿರಿ ನಗರ, ಕಾರಟಗಿ ಗ್ರಾಮೀಣ, ಕಾರಟಗಿ ನಗರ, ಕೊಪ್ಪಳ ಗ್ರಾಮಾಂತರ, ಕೊಪ್ಪಳ ನಗರ, ಭಾಗ್ಯ ನಗರ, ಕುಷ್ಟಗಿ ಗ್ರಾಮೀಣ, ಕುಷ್ಟಗಿ ನಗರ, ತಾವರಗೇರಾ ನಗರ, ಹನಮಸಾಗರ ನಗರ, ಕುಕನೂರು ಗ್ರಾಮಾಂತರ, ಕುಕನೂರು ನಗರ, ಯಲಬುರ್ಗಾ ಗ್ರಾಮಾಂತರ, ಯಲಬುರ್ಗಾ ನಗರ ಸೇರಿದ ಜಿಲ್ಲೆಯಲ್ಲಿ ಒಟ್ಟು 2523 ಒಟ್ಟು ಹೆ???ಲ್.ಬಿ.ಗಳು, 2783 ಎಣಿಕೆದಾರರು, 470 ಮೇಲ್ವಿಚಾರಕರು ಸೇರಿ ಒಟ್ಟು 3253 ಜನರನ್ನು ಜನಗಣತಿ ಕಾರ್ಯಕ್ರಮಕ್ಕೆ ನೇಮಕ ಮಾಡಲಾಗಿದೆ. 2027ರ ಭಾರತ ಜನಗಣತಿ ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆ ಗಣತಿ ಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲು (https://se.census.gov.in) ವೆಬ್ ಪೋರ್ಟಲ್‌ನ ಮೂಲಕ ಸ್ವಯಂ–ಗಣತಿ (Self Enumeration) ಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಲು ಮತ್ತು ಮನೆ ಮನೆಗಳಿಗೆ ಗಣತಿದಾರರ ಭೇಟಿ ನೀಡಿದಾಗ ಅಗತ್ಯ ಮಾಹಿತಿ ನೀಡುವ ಮೂಲಕ ಸಹಕರಿಸಿ ರಾಜ್ಯದಲ್ಲಿ ನಡೆಯಲಿರುವ ಮನೆಗಳ ಪಟ್ಟಿ ಮತ್ತು ಮನೆ ಗಣತಿ ಹಾಗೂ ಸ್ವಯಂ–ಗಣತಿ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

**ಜಿಲ್ಲೆಯಲ್ಲಿ ಯಾವುದೇ ರೀತಿಯ ಪೆಟ್ರೋಲ್ & ಡಿಸೇಲ್ ಕೊರತೆಯಿಲ್ಲ:** ಜಿಲ್ಲೆಯಲ್ಲಿ ಐಒಸಿಎಲ್ 70, ಬಿಪಿಸಿಎಲ್ 46, ಹೆಚ್‌ಪಿಸಿಎಲ್ 34 ಹಾಗೂ ಜಿಯೋ ಬಿಪಿ 6 ಮತ್ತು ನಯಾರ 11 ಸೇರಿ ಒಟ್ಟು 167 ಪೆಟ್ರೋಲ್ ಬಂಕ್‌ಗಳಿವೆ. ಜಿಲ್ಲೆಯಲ್ಲಿ ಒಂದು ದಿನಕ್ಕೆ 159 ಕಿಲೋ ಲೀಟರ್ ಪೆಟ್ರೋಲ್ ಮತ್ತು 470 ಕಿಲೋ ಲೀಟರ್ ಡಿಸೇಲ್ ಸೇರಿ 630 ಕಿಲೋ ಲೀಟರ್ ಇಂಧನದ ಅವಶ್ಯಕತೆಯಿದ್ದು, ಒಂದು ತಿಂಗಳಲ್ಲಿ ಒಟ್ಟು 4936 ಕಿಲೋ ಲೀಟರ್ ಪೆಟ್ರೋಲ್ ಹಾಗೂ 14,113 ಕಿಲೋ ಲೀಟರ್ ಡಿಸೇಲ್ ಬೇಕಾಗುತ್ತದೆ. ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ನಿರಂತರ ಸರಬರಾಜು ಆಗುತ್ತಿದೆ. ಕೆಲವು ಗ್ರಾಮೀಣ ಭಾಗಗಳಲ್ಲಿ ಜನರು ಆತಂಕಕ್ಕೆ ಒಳಗಾಗಿ ಪೆಟ್ರೋಲ್ & ಡಿಸೇಲ್ ಶೇಖರಣೆ ಮಾಡಿಕೊಳ್ಳುತ್ತಿರುವುದು ಕೇಳಿಬರುತ್ತಿದೆ. ಆದರೆ, ನಮ್ಮ ಜಿಲ್ಲೆಯಲ್ಲಿ ಪೆಟ್ರೋಲ್ & ಡಿಸೇಲ್ ಅಭಾವ ಇರುವುದಿಲ್ಲ. ಸಾಕಷ್ಟು ತೈಲ ಸಂಗ್ರಹ ಎಲ್ಲಾ ಬಂಕ್‌ಗಳಲ್ಲಿಯೂ ಲಭ್ಯವಿರುತ್ತದೆ. ಕಾರಣ ಸಾರ್ವಜನಿಕರು ಆತಂಕ ಪಡಬೇಕಾಗಿ ರುವುದಿಲ್ಲ. ನಾಗರಿಕರು ಭಯಭೀತರಾಗಿ ಇವುಗಳ ಖರೀದಿಯಲ್ಲಿ ತೊಡಗಬಾರದು. ಇಂತಹ ಕಾರ್ಯದಲ್ಲಿ ತೊಡಗುವುದು ಅನಗತ್ಯ, ಅನಾನುಕೂಲತೆಯನ್ನು ಉಂಟು ಮಾಡಬಹುದು ಮತ್ತು ಸಾಮಾನ್ಯ ಪೂರೈಕೆ ಕಾರ್ಯವಿಧಾನಗಳನ್ನು ಅಡ್ಡಿಪಡಿಸಬ ಹುದು. ದೇಶದಲ್ಲಿ ಸದ್ಯ ಎರಡು ತಿಂಗಳಿಗೆ ಆಗುವಷ್ಟು ಇಂಧನ ಲಭ್ಯವಿದೆ ಎಂದು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಮತ್ತು ನ್ಯಾಷ್ನಲ್ ಗ್ಯಾಸಿಂಗ್ ನವರು ಸ್ಪಷ್ಟೀಕರಣ ನೀಡಿದ್ದು, ಸಾರ್ವಜನಿಕರು ಯಾವುದೇ ಆತಂಕ ಪಡುವ ಅವಶ್ಯಕತೆಯಿಲ್ಲ ಎಂದರು.

ಜಿಲ್ಲೆಯಲ್ಲಿ ಗೃಹಬಳಕೆದಾರರಿಗೆ ಸಿಲಿಂಡರ್‌ಗಳ ಕೊರತೆ ಇರುವುದಿಲ್ಲ ಹಾಗೂ ಕಲ್ಯಾಣ ಇಲಾಖೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ನಿಲಯಗಳು, ಆಸ್ಪತ್ರೆಗಳು, ಅಕ್ಷರ ದಾಸೋಹ ಯೋಜನೆಯಡಿಯಲ್ಲಿನ ಶಾಲೆಗಳಿಗೆ ಮತ್ತು ಇಂದಿರಾ ಕ್ಯಾಂಟಿನ್‌ಗಳಿಗೆ ಆದ್ಯತೆಯ ಮೇಲೆ ಸಿಲಿಂಡರ್ ವಿತರಿಸಲು ಕ್ರಮವಹಿಸಲಾಗಿರುತ್ತದೆ. ಜಿಲ್ಲೆಯಲ್ಲಿ ಬಿಪಿಸಿ 11, ಐಒಸಿ 6 ಮತ್ತು ಹೆಚ್.ಪಿ.ಸಿ 7 ಸೇರಿದಂತೆ ಒಟ್ಟು 24 ಗ್ಯಾಸ್ ಏಜೆನ್ಸಿಗಳುವೆ. ಸಿಂಗಲ್ ಸಿಲಿಂಡರ್ ಗಳ ಗ್ರಾಹಕರಿಗೆ ಬುಕ್ಕಿಂಗ್ ಅವಧಿ 25 ದಿನ, ಡಬಲ್ ಸಿಲಿಂಡರ್ ಗಳ ಗ್ರಾಹಕರಿಗೆ ಬುಕ್ಕಿಂಗ್ ಅವಧಿ 35 ದಿನ, ಗ್ರಾಮೀಣ ಪ್ರದೇಶದ ಉಜ್ವಲ ಯೋಜನೆಯಲ್ಲಿ ಗ್ರಾಹಕರಿಗೆ ಬುಕ್ಕಿಂಗ್ ಅವಧಿ 45 ದಿನಗಳು. ಗೃಹಬಳಕೆ ಸಿಲಿಂಡರ್ ಗಳ ಸಂಪರ್ಕ ಹೊಂದಿದವರ ವಿವರದಂತೆ ಜಿಲ್ಲೆಯಲ್ಲಿ 2,24,877 ಸಿಂಗಲ್, 1,52,138 ಡಬಲ್ ಸೇರಿ ಒಟ್ಟು 3,77,015 ಗೃಹಬಳಕೆ ಸಂಪರ್ಕಗಳಲ್ಲಿ ವಿನಾಯಿತಿ ಹೊಂದಿದ 2824 ಸಂಪರ್ಕಗಳು ಸೇರಿ ಒಟ್ಟು 3,79,839 ಗೃಹಬಳಕೆ ಸಿಲಿಂಡರ್‌ಗಳ ಸಂಪರ್ಕ ಹೊಂದಿವೆ. 4229 ವಾಣಿಜ್ಯ ಬಳಕೆ ಸಂಪರ್ಕ ಹೊಂದಿವೆ. ಗೃಹಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆಗೆ ಬಳಸುತ್ತಿರುವದನ್ನು ಪತ್ತೆಹಚ್ಚಿ 45 ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

ಈ ಬಗ್ಗೆ ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದ್ದು, ಸಾರ್ವಜನಿಕರಿಗೆ ಅನಾನುಕೂಲವಾದಲ್ಲಿ ದೂರವಾಣಿ ಸಂಖ್ಯೆ: 08539–221515 ಗೆ ಕರೆ ಮಾಡಿ ಸಂಪರ್ಕಿಸ ಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಈ ಸಂದರ್ಭದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ವಿಶ್ವನಾಥಗೌಡ ಎಂ.ಎನ್., ಕೇಂದ್ರ ಸರ್ಕಾರದ ಆಯಿಲ್, ಪೆಟ್ರೋಲ್ ಕಂಪನಿಯ ಮತ್ತು ಜಿಲ್ಲಾಧಿಕಾರಿಗಳ ಕಚೇರಿಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಾಲಕಾರ್ಮಿಕರ ನಿರ್ಮೂಲನೆಗೆ ಟಾಸ್ಕ್ ಫೋರ್ಸ್ ಸಭೆ: ಕೊಪ್ಪಳದಲ್ಲಿ ದಾಳಿ, ಕಿಶೋರ ಕಾರ್ಮಿಕ ರಕ್ಷಣೆ



**ಬೆಳಗಾವಿ ವಾರ್ತೆ**

**ಕೊಪ್ಪಳ:** ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆ ಹಾಗೂ ದಾಳಿ/ತಪಾಸಣೆ ಕಾರ್ಯಾಚರಣೆಗಳನ್ನು ಗುರುವಾರ ಕೊಪ್ಪಳ ತಾಲೂಕಿನಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಮಾನ್ಯ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನವದೆಹಲಿ ಹಾಗೂ ಜಿಲ್ಲಾಧಿಕಾರಿಗಳ ಸೂಚನೆಯಂತೆ "PAN-INDIA Rescue & Rehabilitation Campaign of Child and Adolescent Labour" ಅಭಿಯಾನದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಯಿತು. ಮೊದಲಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ದುಂಡಪ್ಪ ತುರಾದಿ ಅವರು, ತಾಲೂಕಿನಾದ್ಯಂತ ಬಾಲಕಾರ್ಮಿಕರನ್ನು ಪತ್ತೆ ಮಾಡುವುದು ಎಲ್ಲಾ ಇಲಾಖೆಗಳ ಜವಾಬ್ದಾರಿ ಎಂದು ತಿಳಿಸಿದರು. ಪ್ರತಿಯೊಬ್ಬ ಅಧಿಕಾರಿಯೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕೈಜೋಡಿಸಬೇಕು ಎಂದು ಸೂಚಿಸಿದರು.

ಬೇಸಿಗೆ ಸಂದರ್ಭದಲ್ಲಿ ಮಕ್ಕಳು ಹಳ್ಳಕೊಳ್ಳಗಳಲ್ಲಿ ಈಜಾಡಲು ಹೋಗುವುದು ಹಾಗೂ ದನ–ಕುರಿಗಳನ್ನು ಕಾಯುವ ಸಂದರ್ಭಗಳಲ್ಲಿ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ ಸ್ಥಳೀಯ ಅಧಿಕಾರಿಗಳು, ಶಿಕ್ಷಕರು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು, ಗ್ರಾಮ ಪಂಚಾಯತ್ ಸದಸ್ಯರು ಮತ್ತು ಪೋಷಕರು ಹೆಚ್ಚಿನ ಜಾಗೃತಿ ವಹಿಸಬೇಕೆಂದು ಹೇಳಿದರು.

ಬಾಲಕಾರ್ಮಿಕರನ್ನು ಗುರುತಿಸಲು ನಿರಂತರ ತಪಾಸಣೆ ನಡೆಸಬೇಕಿದ್ದು, ಕಾರ್ಮಿಕ ಇಲಾಖೆಯ ಜೊತೆಗೆ ಇತರೆ 11 ಇಲಾಖೆಗಳ ಅಧಿಕಾರಿಗಳಿಗೆ ಕಾಯಿದೆ ಕಲಂ–17ರಡಿ ನಿರೀಕ್ಷಕರಾಗಿ ಅಧಿಕಾರ ನೀಡಲಾಗಿದೆ. ಎಲ್ಲ ಅಧಿಕಾರಿಗಳೂ ತಮ್ಮ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಲ್ಲಿ ಅರಿವು ಮೂಡಿಸಲು 1098 ಮಕ್ಕಳ ಸಹಾಯವಾಣಿ ಸಂಖ್ಯೆಯ ಮಾಹಿತಿ ಗೋಡೆ ಬರಹಗಳನ್ನು ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಅಳವಡಿಸಲು ಸೂಚಿಸಲಾಯಿತು.

ಸಭೆಯ ನಂತರ ಕೊಪ್ಪಳ ನಗರದಲ್ಲಿ ದಾಳಿ ಹಾಗೂ ತಪಾಸಣೆ ಕಾರ್ಯಾಚರಣೆ ನಡೆಸಲಾಯಿತು. ವಿವಿಧ ಹೋಟೆಲ್, ಗ್ಯಾರೇಜ್, ಬೇಕರಿ ಹಾಗೂ ಅಂಗಡಿಗಳಲ್ಲಿ ಪರಿಶೀಲನೆ ನಡೆಸಿ, ಕರಪತ್ರಗಳನ್ನು ಹಂಚಿ ಜಾಗೃತಿ ಮೂಡಿಸಲಾಯಿತು. 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದೆಂದು ಮಾಲೀಕರಿಗೆ ಎಚ್ಚರಿಕೆ ನೀಡಲಾಯಿತು.

ಕಾರ್ಯಾಚರಣೆಯಲ್ಲಿ ಕಾರ್ಮಿಕ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ, ಪೊಲೀಸ್ ಇಲಾಖೆ, ಮಕ್ಕಳ ಸಹಾಯವಾಣಿ 1098 ಸಿಬ್ಬಂದಿ, ಮಹಿಳಾ ಸಾಂತ್ವನ ಕೇಂದ್ರ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದರು.

ಈ ವೇಳೆ ನಗರದ "ಮಾಜಿಸಾ ಕಲೆಕ್ಷನ್" ಬಟ್ಟೆ ಅಂಗಡಿಯಲ್ಲಿ ಒಬ್ಬ ಕಿಶೋರ ಕಾರ್ಮಿಕ ಪತ್ತೆಯಾಗಿದ್ದು, ಆತನನ್ನು ರಕ್ಷಿಸಿ ಮುಂದಿನ ಪೋಷಣೆ ಹಾಗೂ ಪುನರ್ವಸತಿಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಸೇವಾ ಮನೋಭಾವದಿಂದ ವ್ಯಕ್ತಿತ್ವ ಬೆಳವಣಿಗೆಯಾಗುತ್ತದೆ



**ಬೆಳಗಾವಿ ವಾರ್ತೆ**

**ಮೂಡಲಗಿ:** ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳಲ್ಲಿ ಭಾಗವಹಿಸಿ ಸೇವಾ ಮನೋಭಾವ ಬೆಳೆಸಿಕೊಂಡರೆ ನಿಮ್ಮ ವ್ಯಕ್ತಿತ್ವ ಬೆಳವಣಿಗೆ ಯಾಗುತ್ತದೆ ಎಂದು ಮೂಡಲಗಿ ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ ಎಂ.ಜಿ. ವಿಭೂತಿ ಎನ್ ಎಸ್ ಎಸ್ ಶಿಬಿರಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅವರು ಇಂದು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಇಲ್ಲಿಗೆ ಸಮೀಪದ ದತ್ತು ಗ್ರಾಮ ಪಟಗುಂದಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ 2025–26ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿ, ನಿಸರ್ಗ, ಸೂರ್ಯ, ನದಿ, ವಾಯು ಮತ್ತು ಪಂಚ ಮಹಾಭೂತಗಳು ನಮಗಾಗಿ ನಿರಂತರವಾಗಿ ಕೆಲಸ ಮಾಡುತ್ತವೆ.

ಅವುಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯ.ಆದ್ದರಿಂದ ಗ್ರಾಮಸ್ಥರಿಗೆ ಇದರ ಅರಿವು ಮೂಡಿಸುವ ಕೆಲಸವನ್ನು ಸ್ವಯಂಸೇವಕರು ಏಳು ದಿನಗಳ ಈ ಶಿಬಿರದಲ್ಲಿ ಮಾಡಬೇಕು ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು

ಅಧ್ಯಕ್ಷತೆಯನ್ನು ವಹಿಸಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಚೇರಮನ್ನ ವೆಂಕಟೇಶ್ ಸೋನವಾಲ್ಕರ ಮಾತನಾಡಿ, ಶಿಬಿರಾರ್ಥಿಗಳು ಕೇವಲ ತಮ್ಮಷ್ಟಕ್ಕೆ ತಾವು ಮಾತ್ರ ಕೆಲಸ ಮಾಡದೆ ತಮ್ಮ ಕೆಲಸ ಕಾರ್ಯಗಳಲ್ಲಿ ಗ್ರಾಮಸ್ಥರನ್ನು ಸಹ ಭಾಗಿಗಳನ್ನಾಗಿ ಮಾಡಿಕೊಂಡು ಶಾಶ್ವತವಾಗಿ ಉಳಿಯುವ ಕೆಲಸಗಳನ್ನು ಮಾಡಬೇಕು. ಅದರಂತೆ ಗ್ರಾಮಸ್ಥರು ಕೂಡ ವಿದ್ಯಾರ್ಥಿಗಳ ತಪ್ಪು ತಡೆಗಳನ್ನು ಮನ್ನಿಸಿ ಮಾರ್ಗದರ್ಶನ ಮಾಡಿ ಅವರಿಂದ ರಚನಾತ್ಮಕ ಕೆಲಸಗಳನ್ನು ಮಾಡಿಸಿಕೊಂಡು ಶಿಬಿರದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿಕೊಂಡರು. ಆಡಳಿತಾಧಿಕಾರಿ ಡಾ ಎಸ್.ಎಲ್. ಚಿತ್ರಗಾರ ಮಾತನಾಡಿ, ಏಳು ದಿನಗಳ ಈ ಶಿಬಿರದಲ್ಲಿ ಶ್ರಮದಾನ, ವಿಶೇಷ ಉಪನ್ಯಾಸ ಕಾರ್ಯಕ್ರಮ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗಳು ಸೇರಿದಂತೆ ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು ಸಸಿಗೆ ನೀರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಸಮಾರಂಭದಲ್ಲಿ ರಾಮಣಗೌಡ ಪಾಟೀಲ್, ಪಡದಯ್ಯ ಹಿರೇಮಠ, ಗಿರಿಗೌಡ ಪಾಟೀಲ್, ಚನ್ನಗೌಡ ಪಾಟೀಲ್, ನೂರು ಮಹಮ್ಮದ್ ಪಿರಜಾದೆ, ಶಿವರಾಜ್ ಪಾಟೀಲ್, ಯಲ್ಲಪ್ಪಾ ಪಾಟೀಲ್, ಡಾ. ಎಸ್.ಎಲ್. ಚಿತ್ರಗಾರ, ಮಹಾವೀರ್ ಕೋಳಿ, ಅಶೋಕ್ ಹಂಜಿ, ಸುಭಾಷ್ ಪಾಟೀಲ್, ಶಿವಬಸು ಗುಡ್ಲಿ, ಪಿ.ಬಿ. ಚೌಡಕಿ ಎ.ಎಸ್. ಮೀಶಿನಾಯಕ ಡಾ ಬಸವಂತ ಬರಗಾಲಿ ಎಸ್.ಕೆ ಕೊತ್ತಲ ಪಿ.ಬಿ. ಬೆಳಗಲಿ, ಎಸ್.ಎಸ್. ಕುಲಿಗೋಡ ಕೆ.ಪಿ. ಡೋಣಿ, ಎಸ್.ಕೆ. ಅಂಗಡಿ, ಸಂತೋಷ ಮುಗಳಿ ಎಸ್ ಪಿ ಕಾಂಬಳೆ, . ಎನ್ ಪಿ ಬರಮ್ಮನ್ನವರ ಪ್ರತಿಭಾ ಪಂಡ್ರೊಳಿ ಭಾರತಿ ತಳವಾರ ವೆಂಕಟೇಶ್ ಪಾಟೀಲ್, ಲಕ್ಷ್ಮಣ್ ನಂದಿ ರಮೇಶ್ ಖಾನಪ್ಪಗೋಳ, ಕಲ್ಮೇಶ್ ಇಂಗಳೆ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಗಳಾದ ಡಾ ಪವನ್ ಕುಮಾರ್ ಕೆ ಸ್ವಾಗತಿಸಿದರು. ಇನ್ನೊರ್ವ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಲೋಕೇಶ್ ಹಿಡ್ಕಲ್ ನಿರೂಪಿಸಿದರು. ಪ್ರೊ ವೇದಾ ದೇಶಪಾಂಡೆ ವಂದಿಸಿದರು.

# ಒಬ್ಬ ಆದರ್ಶ ವ್ಯಕ್ತಿ ಹೀಗೆ ಇರಬೇಕೆಂದು ಶ್ರೀರಾಮನು ವಿಶ್ವಕ್ಕೆ ತೋರಿಸಿಕೊಟ್ಟ ಮಹಾನ್ ಪುರುಷನಾಗಿದ್ದಾನೆ



**ಬೆಳಗಾವಿ ವಾರ್ತೆ**

**ಗೋಕಾಕ:** ಭಾರತದ ಪ್ರತಿಯೊಬ್ಬ ನಾಗರಿಕರು ನಮ್ಮ ಸನಾತನ ಧರ್ಮದ ಮೌಲ್ಯ ಉಳಿಸಬೇಕು. ಒಬ್ಬ ಆದರ್ಶ ವ್ಯಕ್ತಿ ಹೀಗೆ ಇರಬೇಕೆಂದು ಶ್ರೀರಾಮನು ವಿಶ್ವಕ್ಕೆ ತೋರಿಸಿಕೊಟ್ಟ ಮಹಾನ್ ಪುರುಷನಾಗಿದ್ದಾನೆ ಎಂದು ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದ ಶ್ರೀರಾಮ ಅಭಿಮಾನಿ ಬಳಗದ ಸಂಚಾಲಕ ವೀರನಾಯ್ಕ ನಾಯ್ಕರ ಹೇಳಿದರು.

ತಾಲೂಕಿನ ಬೆಟಗೇರಿ ಗ್ರಾಮದ ಶ್ರೀರಾಮ ಅಭಿಮಾನಿ ಬಳಗದ ಸಹಯೋಗದಲ್ಲಿ ಮಾ.27ರಂದು ಬೆಟಗೇರಿ ಗ್ರಾಮದಲ್ಲಿ ನಡೆದ ಶ್ರೀರಾಮ ನವಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೀರಾಮ ಒಬ್ಬ ಆದರ್ಶ ಪುರುಷನಾಗಿದ್ದಾನೆ. ಶ್ರೀರಾಮನ ತತ್ವಾದರ್ಶಗಳನ್ನು ಇಂದು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಸ್ಥಳೀಯ ವೇದಮೂರ್ತಿ ಈರಯ್ಯ ಹಿರೇಮಠ, ಸಂಗಯ್ಯ ಹಿರೇಮಠ, ವಿಜಯ ಮಠದ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀರಾಮನ ಭಾವಚಿತ್ರಕ್ಕೆ ಮಹಾಪೂಜೆ, ಪುಷ್ಪಾರ್ಪನೆ ಸಮರ್ಪಿಸಿದ ಬಳಿಕ ಸ್ಥಳೀಯ ಬೆಟಗೇರಿ ಗ್ರಾಮ ಪಂಚಾಯತ ಗ್ರಂಥಾಲಯ ಮತ್ತು ಅರಿವು ಕೇಂದ್ರದ ಮೇಲ್ವಿಚಾರಕ ಬಸವರಾಜ ಪಣದಿ ಪ್ರಾಸ್ತಾವಿಕವಾಗಿ ಶ್ರೀರಾಮನ ಬದುಕಿನ ತತ್ವದಾರ್ಶಗಳ ಕುರಿತು ಮಾತನಾಡಿದರು. ಸಿಹಿ ವಿತರಣೆ ನಂತರ ಮಹಾಪ್ರಸಾದ ಜರುಗಿತು.

ತಾಪಂ ಮಾಜಿ ಸದಸ್ಯ ಬಸವಂತ ಕೋಣಿ, ಲಕ್ಷ್ಮಣ ಚಂದರಗಿ, ಈರಣ್ಣ ಬಳಿಗಾರ, ಲಕ್ಕಪ್ಪ ಚಂದರಗಿ, ಕೆಂಪಣ್ಣ ಪೇದನ್ನವರ, ಭೀಮಪ್ಪ ಪೇದನ್ನವರ, ಹನಮಂತ ವಗ್ಗರ, ಮಲ್ಲಿಕಾರ್ಜುನ ಪೇದನ್ನವರ, ಮಲ್ಲಪ್ಪ ಪೇದನ್ನವರ, ಭರಮಣ್ಣ ಪೂಜೇರಿ, ಲಕ್ಷ್ಮಣ ಚಿನ್ನನ್ನವರ, ನಾಗಪ್ಪ ವಗ್ಗರ, ತಮ್ಮಣ್ಣ ಮೆಟ್ಟಿನ್ನವರ, ಫಕೀರಪ್ಪ ಪೇದನ್ನವರ, ಸಂಜು ಪೂಜೇರಿ, ಭೀಮನಾಯ್ಕ ನಾಯ್ಕರ, ಇಡಪ್ಪ ರಾಮಗೇರಿ, ನಾಗಪ್ಪ ವಗ್ಗರ, ಶಿವಾನಂದ ಚಿನ್ನನವರ, ಮಂಜು ಹಳಬರ, ಬಾಳಪ್ಪ ಮೆಟ್ಟಿನ್ನವರ, ಮಲ್ಲಪ್ಪ ಕಳಸಪ್ಪಗೋಳ ಸ್ಥಳೀಯ ಶ್ರೀರಾಮ ಅಭಿಮಾನಿ ಬಳಗದ ಪದಾಧಿಕಾರಿಗಳು, ಸದಸ್ಯರು, ಗ್ರಾಮಸ್ಥರು ಇದ್ದರು.

# ಹೊನಕುಪ್ಪಿ ಜಾನಪ ಜಾತ್ರೆ: ರಂಜಿಸಿದ ಕಲಾ ತಂಡಗಳು
# ‘ಜಾನಪದ ಕಲೆಗಳನ್ನು ಉಳಿಸಿ ಬೆಳೆಸಬೇಕು’

**ಬೆಳಗಾವಿ ವಾರ್ತೆ**

**ಮೂಡಲಗಿ:** ‘ನಾಡಿನ ಸಂಸ್ಕೃತಿಯ ತಾಯಿಬೇರುವಾಗಿರುವ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವುದು ಕಲಾವಿದರು ಮತ್ತು ಸಮಾಜದ ಕೈಯಲ್ಲಿದೆ’ ಎಂದು ಚಂದ್ರಮ್ಮಾದೇವಿ ಕೈವಲ್ಯ ಮಠದ ಶರಣಬಸಪ್ಪ ಅಜ್ಜನವರು ಹೇಳಿದರು.

ತಾಲ್ಲೂಕಿನ ಹೊನಕುಪ್ಪಿ ಗ್ರಾಮದ ಚಂದ್ರಮ್ಮದೇವಿ ಕೈವಲ್ಯ ಮಠ ಆವರಣದಲ್ಲಿ ಧಾರವಾಡದ ಇಬ್ರಾಹಿಂ ಸುತಾರ ಸಾಮರಸ್ಯ ಸಾಂಸ್ಕೃತಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜರುಗಿದ ಜಾನಪದ ಜಾತ್ರೆ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು ಗ್ರಾಮೀಣ ಬದುಕಿನ ಉತ್ಸಾಹ ಇಮ್ಮಡಿಸುವ ಅಂತಿಪದ, ಲಾವಣಿ, ಸುಗ್ಗಿ, ಸೋಬಾನ, ಡೊಳ್ಳಿನ ಪದಗಳು ಮೊಬೈಲ್ ಹಾವಳಿಯಲ್ಲಿ ಮರೆಯಾಗುತ್ತಲಿವೆ. ಅವುಗಳನ್ನು ಉಳಿಸುವುದು ಎಲ್ಲ ಜವಾಬ್ದಾರಿಯಾಗಿದೆ ಎಂದರು.

ಜಾನಪದ ಕಲೆಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕಲಾವಿದ ಇಮಾಮಸಾಬ ವಲ್ಲಪ್ಪನವರ ಇಬ್ರಾಹಿಂ ಸುತಾರ ಸಾಮರಸ್ಯ ಸಾಂಸ್ಕೃತಿ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಜಾನಪದ ಕಲೆಗಳ ಪ್ರದರ್ಶನ ಮೂಲಕ ಉಳಿಸಿ ಬೆಳೆಸುತ್ತಿದ್ದಾರೆ. ಅವರ ಕಾರ್ಯವು ಶ್ಲಾಘನೀಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಕಾಶ ಹೆಗಡೆ ಮಾತನಾಡಿ ಜಾನಪದ ಕಲಾವಿದರಿಗೆ ಸರ್ಕಾರವು ಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.



ಸಮಾರಂಭದಲ್ಲಿ ಹೊನಕುಪ್ಪಿ ಗ್ರಾಮದ ಗಣ್ಯರು ಮತ್ತು ಭಕ್ತರು ಅತಿಥಿಯಾಗಿ ಭಾಗವಹಿಸಿದ್ದರು.

10 ಜಾನಪದ ಕಲಾ ತಂಡಗಳು ವೈವಿದ್ಯಮಯವಾದ ನೃತ್ಯ, ಹಾಡು, ಕುಣಿತಗಳ ಮೂಲಕ ಜನರನ್ನು ರಂಜಿಸಿದರು. ಜಾನಪದ ಲೋಕವನ್ನು ಅನಾವರಣಗೊಳಿಸಿದರು.

ಜಾನಪದ ಗಾಯಕ ನಿಂಗಪ್ಪ ದೊಡ್ಡ ಪೂಜಾರ ನಿರೂಪಿಸಿದರು.

# ಉಚಿತ ಬೇಸಿಗೆ ಶಿಬಿರಕ್ಕಾಗಿ ಅರ್ಜಿ ಆಹ್ವಾನ

ಧಾರವಾಡ: ಮಕ್ಕಳ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ ಎಪ್ರಿಲ್ ಹಾಗೂ ಮೇ–2026 ರ ತಿಂಗಳಲ್ಲಿ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಲಾಗುತ್ತಿದೆ.

ಶಿಬಿರದಲ್ಲಿ ಮಕ್ಕಳ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ಪಾಲಕರಿಗೆ ಮಕ್ಕಳ ಪೌಷ್ಟಿಕ ಆಹಾರ, ಆರೋಗ್ಯ ಹಾಗೂ ಜೀವನಶೈಲಿ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ಮಕ್ಕಳು ಮತ್ತು ಪಾಲಕರು ಎಪ್ರಿಲ್ 05, 2026 ರೊಳಗೆ ದೂರವಾಣಿ: 8050392209 ಗೆ ಕರೆ ಮಾಡಿ, ಶಿಬಿರಕ್ಕೆ ನೊಂದಾಯಿಸಿಕೊಳ್ಳಬಹುದೆಂದು ಕರ್ನಾಟಕ ಬಾಲವಿಕಾಸ ಅಕಾಡೆಮಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿವೃತ್ತ ಸರ್ಕಾರಿ ನೌಕರರ ಪಿಂಚಣಿ ಕಡಿತಗೊಳಿಸಬೇಡಿ



**ಬೆಳಗಾವಿ ವಾರ್ತೆ**

**ಅಥಣಿ:** ನಿವೃತ್ತ ಸರ್ಕಾರಿ ನೌಕರರಿಗೆ ನೀಡುತ್ತಿರುವ ಪಿಂಚಣಿಯಲ್ಲಿ ಯಾವುದೇ ಸೌಲಭ್ಯ ಕಡಿತಗೊಳಿಸಬಾರದು ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಥಣಿ ತಾಲೂಕ ಘಟಕದ ಅಧ್ಯಕ್ಷ ಎಸ್. ಎಸ್. ಹೂಟಿ ಆಗ್ರಹಿಸಿದರು.

ಅವರು ಇಲ್ಲಿನ ಮಿನಿ ವಿಧಾನಸೌಧ ತಹಸೀಲ್ದಾರ್ ಕಾರ್ಯಾಲಯದಲ್ಲಿ ಗ್ರೇಡ್ 2 ತಹಸೀಲ್ದಾರ್ ಬಿ ವೈ ಹೊಸಕೇರಿ ಅವರಿಗೆ ಮನವಿ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಇತ್ತೀಚಿಗೆ ಲೋಕಸಭೆಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಆರ್ಥಿಕ ಬಿ???ನಲ್ಲಿ 2025ರ ಏಪ್ರಿಲ್ 1ಕ್ಕಿಂತ ಮುಂಚೆ ಸೇವಾ ನಿವೃತ್ತಿ ಹೊಂದಿದ ಸರ್ಕಾರಿ ನೌಕರರಿಗೆ ನೀಡುವ ಪಿಂಚಣಿ ಮತ್ತು ಕೌಟುಂಬಿಕ ಪಿಂಚಣಿಯಲ್ಲಿನ ಕೆಲವು ಸೌಲಭ್ಯ ಕಡಿತಗೊಳಿಸುವುದಾಗಿ ತಿಳಿಸಿದ್ದಾರೆ. ಇದರಿಂದ ನಿವೃತ್ತ ನೌಕರರು ಮತ್ತು ಅವರನ್ನು ಅವಲಂಬಿಸಿದ ಕುಟುಂಬಸ್ಥರು ಸಂಕಷ್ಟಕ್ಕೆ ಸಿಲುಕಲಿದ್ದು, ಯಾವುದೇ ಸೌಲಭ್ಯ ಕಡಿತಗೊಳಿಸಬಾರದು ಎಂದು ಒತ್ತಾಯಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಪತ್ರ ಸಲ್ಲಿಸಿದ್ದೇವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಅಥಣಿ ತಾಲೂಕ ನಿವೃತ್ತ ನೌಕರರ ಸಂಘದ ಪ್ರಕಾಶ ಖೋತ, ಐ. ಕೆ. ಕುಂಬಾರ, ಆರ್. ಎಸ್. ಚಿಗರಿ, ಶಿರಾಗಾಂವಕರ, ಎಸ್. ಎ. ಗಸ್ತಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಉಸ್ತುವಾರಿಯಾಗಿ ಕೃಷ್ಣಗೌಡ ಎಚ್. ಪಾಟೀಲ ಅವರು ನೇಮಕ



ಗದಗ: ರಾಜ್ಯದಲ್ಲಿ ಪ್ರಸ್ತುತ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯುತ್ತಿದ್ದು, ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿರುವ ಕೃಷ್ಣಗೌಡ ಎಚ್. ಪಾಟೀಲ ಅವರನ್ನು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಉಸ್ತುವಾರಿಯಾಗಿ ನೇಮಕವಾಗಿದ್ದಾರೆ. ಈ ಕುರಿತು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷರಾಗಿರುವ ಮಂಜುನಾಥ ಎಚ್.ಎಸ್. ಅವರು ಆದೇಶ ಹೊರಡಿಸಿದ್ದಾರೆ.

# ಪೊಲೀಸರ ಭರ್ಜರಿ ಯಶಸ್ಸು: 110 ಕಳೆದುಹೋದ ಮೊಬೈಲ್‌ಗಳ ಪತ್ತೆ, ವಾರಸುದಾರರಿಗೆ ಹಸ್ತಾಂತರ



**ಬೆಳಗಾವಿ ವಾರ್ತೆ**

**ಅಥಣಿ:** "ನಿಮ್ಮ ಮೊಬೈಲ್ ಕಳೆದುಹೋದರೆ ಆತಂಕ ಬೇಡ, ತಕ್ಷಣ ಸಿಇಐಆರ್ (CEIR) ಪೋರ್ಟಲ್‌ನಲ್ಲಿ ದೂರು ದಾಖಲಿಸಿ" ಎಂದು ಸಾರ್ವಜನಿಕರಲ್ಲಿ ಭರವಸೆ ಮೂಡಿಸಿರುವ ಅಥಣಿ ಉಪವಿಭಾಗದ ಪೊಲೀಸರು, ತಾಂತ್ರಿಕ ಕಾರ್ಯಾಚರಣೆಯ ಮೂಲಕ ಪತ್ತೆಹಚ್ಚಿದ 110 ಮೊಬೈಲ್ ಫೋನ್‌ಗಳನ್ನು ಶುಕ್ರವಾರ ವಾರಸುದಾರರಿಗೆ ಹಸ್ತಾಂತರಿಸಿದರು.

ಅಥಣಿ ಪೊಲೀಸ್ ಸಭಾ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಥಣಿ ಉಪವಿಭಾಗದ ಡಿವೈಎಸ್‌ಪಿ ಪ್ರಶಾಂತ. ಮುನ್ನೊಳ್ಳಿ ಅವರು ಮೊಬೈಲ್‌ಗಳನ್ನು ವಿತರಿಸಿ ಮಾತನಾಡಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ. ರಾಮರಾಜನ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್. ಬಿ. ಬಸರಗಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

"ಸಿಇಐಆರ್ ಪೋರ್ಟಲ್‌ನಲ್ಲಿ ದೂರು ದಾಖಲಿಸಿದರೆ, ಕಳೆದುಹೋದ ಮೊಬೈಲ್‌ಗಳಲ್ಲಿ ಬೇರೆ ಸಿಮ್ ಕಾರ್ಡ್ ಹಾಕಿದ ತಕ್ಷಣ ನಮಗೆ ಮಾಹಿತಿ ಲಭ್ಯವಾಗುತ್ತದೆ. ಈ ತಂತ್ರಜ್ಞಾನದ ನೆರವಿನಿಂದ ಈಗಾಗಲೇ ಸಾವಿರಕ್ಕೂ ಹೆಚ್ಚು ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಜನರಿಗೆ ಮರಳಿ ನೀಡಲಾಗಿದೆ. ಸಾರ್ವಜನಿಕರು ಮೊಬೈಲ್ ಕಳೆದುಕೊಂಡಾಗ ನಿರ್ಲಕ್ಷ್ಯ ಮಾಡದೆ ಇಲಾಖೆಯ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಡೇಟ್ ಮಾಡಬೇಕು" ಎಂದು ಪ್ರಶಾಂತ್ ಮುನ್ನೊಳ್ಳಿ ತಿಳಿಸಿದರು.

**ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಪತ್ತೆಯಾದ ಒಟ್ಟು 110 ಮೊಬೈಲ್‌ಗಳ ವಿವರ ಎಂದರೆ :**

ಅಥಣಿ ಠಾಣೆ: 37, ಐಗಳಿ ಠಾಣೆ: 20, ಕಾಗವಾಡ ಠಾಣೆ: 20, ರಾಯಬಾಗ ಠಾಣೆ: 13, ಹಾರೂಗೇರಿ ಠಾಣೆ: 10,ಕುಡಚಿ ಠಾಣೆ: 10


ಈ ಸಂದರ್ಭದಲ್ಲಿ ಸಿಪಿಐಗಳಾದ ಸಂತೋಷ ಹಳ್ಳೂರ, ಮಲ್ಲಿಕಾರ್ಜುನ ಡಪ್ಪಿನ, ಪಿಎಸ್‌ಐಗಳಾದ ಗಿರಮಲಪ್ಪ ಉಪ್ಪಾರ, ಚಂದ್ರಶೇಖರ ಸಾಗನೂರ ರಾಘವೇಂದ್ರ ಖೋತ, ರಮೇಶ ತೆಲಸಂಗ ಹಾಗೂ ಎಂ. ಎ. ಆಳಂದ ಉಪಸ್ಥಿತರಿದ್ದರು. ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಿಬ್ಬಂದಿಗಳಾದ ಜಮೀರ್ ಡಾಂಗೆ, ಎಸ್. ಎ. ಶೇಕ್, ಅಣ್ಣಪ್ಪ ಹಡಪದ, ಧರ್ಮೇಂದ್ರ ಶ್ಯಾನವಾಡ, ಸುಧಾಕರ ಸನದಿ ಹಾಗೂ ಧರೆಪ್ಪ ಧರಿಗೌಡರ ಸೇರಿದಂತೆ ಇಲಾಖೆಯ ಇತರ ಸಿಬ್ಬಂದಿಗಳು ಹಾಜರಿದ್ದರು. ತಮ್ಮ ಮೊಬೈಲ್ ಫೋನ್ ಗಳನ್ನು ಮರಳಿ ಪಡೆದ ವಾರಸುದಾರರು ಪೊಲೀಸ್ ಇಲಾಖೆಯ ಕಾರ್ಯಕ್ಷಮತೆಗೆ ಹರ್ಷ ವ್ಯಕ್ತಪಡಿಸಿ, ಕೃತಜ್ಞತೆ ಸಲ್ಲಿಸಿದರು

# ವಿಶ್ವ ಜಲ ದಿನಾಚರಣೆ; ಅಣೆಕಟ್ಟು ತಜ್ಞರಾದ ಡಾ|| ಶರದ್ ಜೋಶಿ ಅವರಿಗೆ ಗೌರವ ಸನ್ಮಾನ

**ಬೆಳಗಾವಿ ವಾರ್ತೆ**

**ಹುಬ್ಬಳ್ಳಿ:** ವಿಶ್ವ ಜಲ ದಿನಾಚರಣೆ ಅಂಗವಾಗಿ ದೇಶದ ವಿವಿಧ ರಾಜ್ಯಗಳಾದ ಕರ್ನಾಟಕ , ಮಹಾರಾಷ್ಟ್ರ , ತೆಲಂಗಾಣ , ಗುಜರಾತ್, ಒರಿಸ್ಸಾ, ಅಂಡಮಾನ್ ನಿಕೋಬಾರ್ ,ಬಿಹಾರ್, ರಾಜ್ಯಗಳಲ್ಲಿರುವ ಅಣೆಕಟ್ಟು ಸುರಕ್ಷತೆ , ಮೌಲ್ಯಮಾಪನ ಸಮಿತಿಗಳ ಸದಸ್ಯರಾಗಿರುವ ಹಿರಿಯರಾದ , ಅಣೆಕಟ್ಟು ತಜ್ಞ ರಾದ ಡಾ ಶರದ್ ಜೋಶಿ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಆಯೋಜಿಸಿದ್ದ ಗೌರವ ಸನ್ಮಾನ ಕಾರ್ಯ ಕ್ರಮದಲ್ಲಿ ಅಣೆಕಟ್ಟು ಇಂಜಿನಿಯರಿಂಗ್ ತಜ್ಞರು , ಅಣೆಕಟ್ಟು ಪುನಶ್ಚೇತನ ಹಾಗೂ ಸುಧಾರಣೆ ಯೋಜನೆ ಅಡಿಯಲ್ಲಿ ಅಣೆಕ ಟ್ಟು ಸ್ಥಿರತೆ ವಿಶ್ಲೇಷಣೆ ತಜ್ಞರ, ಅಣೆಕಟ್ಟು ಸುರಕ್ಷತೆ ಸಮೀಕ್ಷೆಯ ತಂಡದಲ್ಲಿರುವ ಡಾ. ಶರದ್ ಜೋಶಿ ಅವರಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯು, ಬಸವ ಪರಿಸರ ಸಂರಕ್ಷಣಾ ಸಮಿತಿಯ ಪದಾಧಿಕಾರಿಗಳು ಶಾಲು, ಮಾಲಾರ್ಪಣೆ ಮಾಡಿ, ಗ್ರಂಥ ಗಳನ್ನು ನೀಡಿ ಗೌರವದಿಂದ ಆತ್ಮೀಯ ವಾಗಿ ಸನ್ಮಾನಿಸಿ ದರು. ಅಭಿನಂದಿಸಿ, ಜಲ ದಿನಾಚರಣೆಯ ಶುಭ ಕೋರಿದರು.

ಸೋಹನ್ ಸುರೇಶ್ ಹೊರಕೇರಿ , ರಾಣಿ ಚನ್ನಮ್ಮ ಪರಿಸರ ಸೇವಾ ಸಮಿತಿಯ ಅಧ್ಯಕ್ಷ, ಸಾಹಿತಿ ಪ್ರೊ ಎಸ್.ಎಂ.ಸಾತ್ಮಾರ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಶ್ರೀಮತಿ ಜೋಶಿ, ಮುಂತಾದವರು ಇದ್ದರು. ಡಾ. ಶರದ್ ಜೋಶಿ ಅವರು ಕೆ.ಎಲ್.ಇ.ಐ. ಟಿಯಲ್ಲಿ ಸಿವಿಲ್ ವಿಭಾಗದ ಮುಖ್ಯಸ್ಥರಾಗಿ, ಶೈಕ್ಷಣಿಕ ಡೀನ್ ರಾಗಿ, ಮುಂದೆ ಕೆ.ಎಲ್.ಇ.ಐ.ಟಿಯ ಪ್ರಾಚಾರ್ಯರಾಗಿ ಅಮೋಘ ಸೇವೆ ಸಲ್ಲಿಸಿ ಸೇವಾ ನಿವೃತ್ತರಾದ ನಂತರ ವಿವಿಧ ರಾಜ್ಯಗಳ ಅಣೆಕಟ್ಟು ಸುರಕ್ಷತಾ ಸಮಿತಿಗಳಲ್ಲಿ ಸದಸ್ಯರಾಗಿ ದೇಶಕ್ಕೆ ಅಮೋಘ ಸೇವೆ ಸಲ್ಲಿಸುತ್ತಿದ್ದಾರೆ. ದೇಶ ಸೇವೆಯೊಂದಿಗೆ ಅವರ ಜೀವನ ಸುಖಕರವಾಗಲೆಂದು ಶುಭ ಕೋರಿದರು. ನೀರಿನ ಮೂಲ , ಅವಶ್ಯಕತೆ, ಮಹತ್ವ ಕುರಿತು ಹಲವಾರು ವಿಚಾರಗಳನ್ನು ಹಂಚಿಕೊಂಡರು.



BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001